بِسْمِ اللّٰهِ الرَّحْمٰنِ الرَّحِيْمِ نَحْمَدُهٗ وَنُصَلِّيْ عَلٰى رَسُوْلِهِ الْكَرِيْمِ وَعَلٰى عَبْدِهِ الْمَسِيْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 29

ವಾರ್ಷಿಕ ಶುಲ್ಕ ರೂ.600/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

18 ಜುಲೈ 2024, 18 ವಫಾ 1403 ಹಿಜರಿ ಶಮ್ಸಿ,
11 ಮುಹರ್ರಮ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ- **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

يٰۤاَيُّهَا الَّذِيْنَ اٰمَنُوْۤا اٰمِنُوْا بِاللّٰهِ
وَرَسُوْلِهٖ وَالْكِتٰبِ الَّذِيْ نَزَّلَ
عَلٰى رَسُوْلِهٖ وَالْكِتٰبِ الَّذِيْۤ اَنْزَلَ
مِنْ قَبْلُ ؕ (النساء:137)

**(ಅನ್ನಿಸಾಅ : 137)**

**ಅಂದರೆ: ಎಲೈ ವಿಶ್ವಾಸಿಗಳೇ, ಅಲ್ಲಾಹನಲ್ಲೂ ಅವನ ಸಂದೇಶವಾಹಕನಲ್ಲೂ ಅವನ ಸಂದೇಶವಾಹಕನಿಗೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ಅದಕ್ಕೆ ಮುಂಚೆ ಅವನು ಅವತೀರ್ಣಗೊಳಿಸಿದ ಗ್ರಂಥದಲ್ಲೂ ವಿಶ್ವಾಸವಿರಿಸಿರಿ.**

## ಪ್ರವಾದಿ ಮುಹಮ್ಮದ್(ಸ) ರವರ ಉಪದೇಶ

### ಓರ್ವ ಮುಸ್ಲಿಮನು ಇನ್ನೋರ್ವ ಮುಸ್ಲಿಮನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು.

**(2442)** ಹಝ್ರತ್ ಅಬ್ದುಲ್ಲ ಬಿನ್ ಉಮರ್(ರ) ವರದಿ ಮಾಡುತ್ತಾರೆ: ರಸೂಲುಲ್ಲಾಹ್ (ಸ) ನುಡಿದರು: ಓರ್ವ ಮುಸ್ಲಿಮನು ಇನ್ನೋರ್ವ ಮುಸಲ್ಮಾನನ ಸಹೋದರನಾಗಿದ್ದಾನೆ, ಅವನನ್ನು ಹಿಂಸಿಸಬಾರದು ಮತ್ತು ಅವನನ್ನು ಕ್ರೂರಿಗೆ ಒಪ್ಪಿಸಬಾರದು. ಯಾವ ವ್ಯಕ್ತಿ ತನ್ನ ಸಹೋದರನ ಕೆಲಸದಲ್ಲಿ ತೊಡಗಿರುವವನು. ಅಲ್ಲಾಹನು ಅವನ ಕೆಲಸದಲ್ಲಿ ತೊಡಗುತ್ತಾನೆ. ಯಾರು ಒಬ್ಬ ಮುಸ್ಲಿಮನ ನೋವನ್ನು ದೂರ ಮಾಡುವನು ಅಲ್ಲಾಹನು ಪುರುತ್ಥಾನದ ದಿನ ಅವನ ನೋವು ದೂರ ಮಾಡುವನು, ಯಾರು ಒಬ್ಬ ಮುಸ್ಲಿಮನ ಪಾಪಗಳನ್ನು ಮುಚ್ಚುವನು, ಅಲ್ಲಾಹನು ಸಹ ಪುನರುತ್ತಾನದ ದಿನ ಅವನ ಪಾಪಗಳನ್ನು ಮುಚ್ಚುವನು.

**(2444)** ಹಝ್ರತ್ ಅನಸ್(ರ) ವರದಿ ಮಾಡುತ್ತಾರೆ, ರಸೂಲುಲ್ಲಾಹ್ (ಸ) ನುಡಿದರು: ತನ್ನ ಸಹೋದರನಿಗೆ ಸಹಾಯ ನೀಡಿ, ಅವನು ಕ್ರೂರಿಯಾಗಿರಲಿ ಅಥವಾ ಹಿಂಸೆಗೆ ಒಳಗಾಗಲಿ, ಸಹಾಬರು ಹೇಳಿದರು: ಯಾ ರಸೂಲಲ್ಲಾಹ್(ಸ)! ನಾವು ತುಳಿತಕ್ಕೊಳಗಾದವರಿಗೆ ಸಹಾಯ ಮಾಡುತ್ತೇವೆ, ಆದರೆ ಅವನು ಕ್ರೂರಿಯಾಗಿದ್ದರೆ ನಾವು ಅವನಿಗೆ ಹೇಗೆ ಸಹಾಯ ಮಾಡಬಹುದು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ಅವನ ಕೈಗಳನ್ನು ದಬ್ಬಾಳಿಕೆ ಮಾಡುವುದರಿಂದ ತಡೆಯಿರಿ.

**(ಸಹೀಹ್ ಬುಖಾರಿ, ಸಂಪುಟ- 4, ಕಿತಾಬುಲ್ ಮಝಾಲಿಮ್, ಮುದ್ರಣ 2008 ಖಾದಿಯಾನ್)**

'ಬದರ್' ವಾರಪತ್ರಿಕೆಯನ್ನು **Online** ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:
**https://akhbarbadr.in/Kannada/#gsc.tab=0**

## ಒಂಟೆಗಳ ಸ್ವಭಾವದಲ್ಲಿ, ಇಮಾಮ್ ಅನ್ನು ಅನುಸರಿಸುವ ಒಂದು ಸಮಸ್ಯೆಯು ಗುರುತಿಸಲ್ಪಟ್ಟ ಸಮಸ್ಯೆಯಾಗಿದೆ

ಎಲ್ಲಾ ಒಂಟೆಗಳು ಒಂದು ನಿರ್ದಿಷ್ಟ ರೀತಿಯಲ್ಲಿ ಅನುಸರಿಸುತ್ತವೆ ಮತ್ತು ಇಮಾಮ್ ಮತ್ತು ಪೂರ್ವವರ್ತಿಯಾಗಿ ಮೊದಲು ಬರುವ ಒಂಟೆಯನ್ನು ವೇಗಗೊಳಿಸುತ್ತವೆ. ಆದ್ದರಿಂದ, ಲೌಕಿಕ ಪ್ರಯಾಣವನ್ನು ತಡೆಯಲು ಇಮಾಮ್ ಇಲ್ಲದಿರುವವರೆಗೆ, ಮಾನವನು ದಾರಿತಪ್ಪಿ ನಾಶವಾಗುತ್ತಾನೆ.

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

ಅವರು ಹೇಳಿದರು: ಪವಿತ್ರ ಖುರ್‌ಆನ್‌ನಲ್ಲಿ ಹೀಗೊಂದು ವಚನವಿದೆ: **ಅಫಲಾ ಯನ್‌ಝುರೂನ ಇಲಲ್ ಇಬಿಲಿ ಕೈಫ ಖುಲಿಖತ್** (ಅಲ್‌ಗ್ಹಾಷಿಯಾ: 18) ಅಂದರೆ: ಅವರು ಒಂಟೆಗಳ ಕಡೆಗೆ ನೋಡುವುದಿಲ್ಲವೇ? ಅವು ಹೇಗೆ ಸೃಷ್ಟಿಸಲ್ಪಟ್ಟಿವೆಯೆಂದು. ಈ ವಚನವು ನಬುವ್ವತ್ (ಪ್ರವಾದಿತ್ವ) ಮತ್ತು ಇಮಾಮತ್‌ನ (ನೇತೃತ್ವ) ಸಮಸ್ಯೆಯನ್ನು ಅರಿಯಲು ಬಹಳ ಸಹಕಾರಿಯಾಗಿದೆ. ಒಂಟೆಗೆ ಅರೇಬಿಕ್ ಭಾಷೆಯಲ್ಲಿ ಸುಮಾರು ಸಾವಿರ ಹೆಸರುಗಳಿವೆ ಮತ್ತು **ಇಬಿಲ್** ಎಂಬ ಪದವನ್ನು ಈ ಹೆಸರುಗಳಿಂದ ತೆಗೆದುಕೊಳ್ಳಲಾಗಿದೆ. ಅದರ ಉದ್ದೇಶವೇನು? **ಇಲಲ್ ಜಮಲಿ** ಎಂದೂ ಹೆಸರಿಸಬಹುದಾಗಿತ್ತು? ಅದರ ತಾತ್ಪರ್ಯ ಅಥವಾ ಅದಕ್ಕೆ ಕಾರಣವೇನೆಂದರೆ **ಜಮಲ್** ಒಂದು ಒಂಟೆಯನ್ನು ಸೂಚಿಸುತ್ತದೆ ಮತ್ತು **ಇಬಿಲ್** ಬಹುವಚನ ನಾಮಪದವಾಗಿದೆ. ಇಲ್ಲಿ, ಸರ್ವಶಕ್ತನಾದ ಅಲ್ಲಾಹನು ನಾಗರಿಕತೆ ಮತ್ತು ಒಮ್ಮತದ ಸ್ಥಿತಿಯನ್ನು ತೋರಿಸಲು ಬಯಸಿದ್ದನು, ಮತ್ತು **ಜಮಲ್** ಒಂದು ಒಂಟೆಗೆ ಹೇಳುವುದ್ದರಿಂದ, ಅದು ಒಂದು ಒಂಟೆಗೆ ಮಾತ್ರ ಹೇಳಲಾಗುತ್ತದೆ. ಅದರಿಂದ ಈ ಉದ್ದೇಶ ಸಾರ್ಥಕವಾಗುತ್ತಿರಲಿಲ್ಲ. ಆದ್ದರಿಂದ **ಇಬಿಲಿ** ಪದಕ್ಕೆ ಆದ್ಯತೆ ನೀಡಲಾಗಿದೆ. ಒಂಟೆಗಳಲ್ಲಿ ಪರಸ್ಪರ ಅನುಸರಿಸುವ ಗುಣಶಕ್ತಿಯನ್ನು ಹೊಂದಿವೆ. ಒಂಟೆಗಳ ಒಂದು ದೊಡ್ಡ ಸಾಲು ನೋಡಿರುವಿರಿ. ಅದು ಯಾವ ರೀತಿ ತಮ್ಮ ಮುಂದಿರುವ ಒಂಟೆಯನ್ನು ಒಂದು ನಿರ್ಧಿಷ್ಠ ರೀತಿಯಲ್ಲಿ ಅನುಸರಿಸುತ್ತ ಹೋಗುತ್ತಿರುತ್ತದೆ. ಎಲ್ಲರಿಗಿಂತ ಮುಂದಿರುವ ಒಂಟೆಯು ಅದರ ಮುಂದಾಳತ್ವ (ಇಮಾಮ್ ರೀತಿಯಲ್ಲಿ) ವಹಿಸಿರುತ್ತದೆ. ಅದು ತುಂಬಾ ಅನುಭವಿ ಹಾಗೂ ಹಾದಿಯನ್ನು ಅರಿತಿರುತ್ತದೆ. ಮತ್ತು ಎಲ್ಲಾ ಒಂಟೆಗಳು ಒಂದರ ಹಿಂದೆ ಮತ್ತೊಂದು ನಡೆದುಕೊಂಡು ಹೋಗುತ್ತವೆ. ಯಾರ ಮನಸ್ಸಿನಲ್ಲಿಯೂ ಅದರ ಸಮಾನವಾಗಿ ನಡೆಯಬೇಕೆಂಬ ಆಸೆ ಹೊಂದಿರುವುದಿಲ್ಲ. ಇತರ ಪ್ರಾಣಿಗಳಲ್ಲಿ ಉದಾಹರಣೆಗೆ ಕುದುರೆ ಇತ್ಯಾದಿಗಳಲ್ಲಿ ಈ ಗುಣ ಇರುವುದಿಲ್ಲ. ಅಂದರೆ ಇದು ಒಂಟೆಯ ಒಂದು ವಿಶಿಷ್ಠ ಗುಣವಾಗಿದೆ. ನೇತೃತ್ವದ ಗುಣ ಅದು ಹೊಂದಿರುತ್ತದೆ. ಅದೇ ಕಾರಣದಿಂದ ಸರ್ವಶಕ್ತನಾದ ಅಲ್ಲಾಹನು **ಅಫಲಾ ಯನ್‌ಝುರೂನ ಇಲಲ್ ಇಬಿಲಿ** ಎಂದು ಹೇಳಿ ಸಾಮೂಹಿಕ ನೇತೃತ್ವದೆಡೆ ನಮ್ಮ ಗಮನ ಸೆಳೆದಿದ್ದಾನೆ. ಯಾವ ರೀತಿ ಒಂಟೆಗಳು ಒಂದೇ ಸಾಲಿನಲ್ಲಿ ಒಂದು ಇನ್ನೊಂದನ್ನು ಅನುಸರಿಸಿಕೊಂಡು ಹೋಗುತ್ತದೆ, ಅದೇ ರೀತಿಯಲ್ಲಿ ಸಾಂಸ್ಕೃತಿಕ ಮತ್ತು ಸಾಮೂಹಿಕ ಐಕ್ಯತೆ ಕಾಪಾಡಿಕೊಂಡು ಹೋಗಲು ಒಬ್ಬ ಇಮಾಮನ (ನೇತೃತ್ವದ) ಅವಶ್ಯಕತೆ ಇರುತ್ತದೆ.

ಮತ್ತು ಪ್ರಯಾಣದ ಸಮಯದಲ್ಲಿ ಈ ಸರತಿ ಸಾಲು ನಡೆಯುತ್ತದೆ, ಆದ್ದರಿಂದ ಪ್ರಪಂಚದ ಪ್ರಯಾಣವನ್ನು ಕಡಿತಗೊಳಿಸಲು, ಇಮಾಮ್ ಇಲ್ಲದಿದ್ದರೆ, ಜನರು ದಾರಿತಪ್ಪಿ ನಾಶವಾಗುತ್ತಾರೆ ಎಂದು ನೆನಪಿನಲ್ಲಿಡಬೇಕು. ಅದೇ ರೀತಿ ಒಂಟೆಯು ಹೆಚ್ಚು ಶ್ರಮಪಡುವ ಮತ್ತು ಹೆಚ್ಚು ನಡೆದುಕೊಂಡು ಹೋಗುವ ಪ್ರಾಣಿಯಾಗಿದೆ. ಅದರಿಂದ ಸಹನೆ ಹಾಗೂ ಸಹಿಷ್ಣುತೆಯ ಪಾಠ ಕಲಿಯಬಹುದಾಗಿದೆ.

ನಂತರ ಒಂಟೆಯು ದೀರ್ಘ ಪ್ರಯಾಣದ ಸಮಯದಲ್ಲಿ ಹಲವಾರು ದಿನಗಳವರೆಗೆ ನೀರನ್ನು ಸಂಗ್ರಹಿಸುವ ಗುಣಲಕ್ಷಣವನ್ನು ಹೊಂದಿದೆ. ಅದರ ಬಗ್ಗೆ ಅಜ್ಞಾನತೆ ಹೊಂದಿರುವುದಿಲ್ಲ. ಆದ್ದರಿಂದ ಸತ್ಯವಿಶ್ವಾಸಿಯು ಯಾವಾಗಲೂ ತನ್ನ ಪ್ರಯಾಣಕ್ಕೆ ಸಿದ್ಧವಾಗಿರಬೇಕು ಮತ್ತು ಜಾಗರೂಕರಾಗಿರಬೇಕು ಮತ್ತು ಉತ್ತಮ ಯಾತ್ರೋಪಕರಣ ಎಂದರೆ ದೇವಭಕ್ತಿಯಾಗಿದೆ. **ಫಇನ್ನ ಖೈರುಝ್ಝಾದಿತ್ತಖ್ವಾ** (ಅಲ್‌ಬಖರ: 198) ದಿಟವಾಗಿಯೂ ದೇವಭಕ್ತಿಯೇ ಅತ್ಯುತ್ತಮ ಯಾತ್ರೋಪಕರಣವಾಗಿದೆ.

**ಯನ್‌ಝುರೂನ್** ಪದದಲ್ಲಿ ಪದದಿಂದ ತಿಳಿದುಬುರುವುದೇನೆಂದರೆ ಅದರ ನೋಡುವಿಕೆ ಮಕ್ಕಳ ರೀತಿಯ ನೋಡುವಿಕೆಯಾಗಿರುವುದಿಲ್ಲ. ಬದಲಿಗೆ ಅದರಿಂದ ಅನುಸರಣೆಯ ಪಾಠ ದೊರೆಯುತ್ತದೆ.

*(ಪುಟ ಸಂಖೆ 08 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

"ಈ ಯುದ್ಧದ ಕಾರಣವನ್ನು ವಿವರಿಸುತ್ತಾ, ಹದೀಸ್‌ನ ನಿರೂಪಕರು ಹಾಗೂ ಜೀವನಚರಿತ್ರೆಯ ಲೇಖಕರು ವಿಭಿನ್ನ ಕಾರಣಗಳನ್ನು ನೀಡುತ್ತಾರೆ ಮತ್ತು ಈ ಭಿನ್ನಭಿಪ್ರಾಯದಿಂದಾಗಿ, ಈ ಯುದ್ಧದ ಸಮಯದ ಬಗ್ಗೆಯು ಭಿನ್ನಭೀಪ್ರಾಯ ಉಂಟಾಗಿದೆ." (ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್)

---

ಮುಹಮ್ಮದ್(ಸ) ಅವರು ತಮ್ಮ ಕೆಲವು ಸಹಚರರೊಂದಿಗೆ ನಿಮ್ಮ ಬಳಿಗೆ ಬಂದಿದ್ದಾರೆ. ಅವರ ಸಂಖ್ಯೆ ಹತ್ತಕ್ಕಿಂತ ಕಡಿಮೆಯಿದೆ. ಈ ಮನೆಯ ಮೇಲಿಂದ ದೊಡ್ಡ ಕಲ್ಲನ್ನು ಎಸೆದು ಮುಹಮ್ಮದ್(ಸ.ಅ)ರನ್ನು ಕೊಂದುಹಾಕಿ. ನಿಮಗೆ ಮತ್ತೆ ಇಂತಹ ಉತ್ತಮ ಅವಕಾಶ ಸಿಗುವುದಿಲ್ಲ. ಅವರನ್ನು ಕೊಂದರೆ ಅವರ ಜೊತೆಗಿದ್ದವರು ಚದುರಿ ಹೋಗುತ್ತಾರೆ. ಮಕ್ಕಾದಿಂದ ಬಂದ ಅವರ ಸಹಚರರು ಮಕ್ಕಾಗೆ ಹಿಂದಿರುಗುತ್ತಾರೆ ಮತ್ತು ನಿಮ್ಮ ಮಿತ್ರರಾದ ಔಸ್ ಮತ್ತು ಖಝ್ರಜ್ ಮಾತ್ರ ಇಲ್ಲಿ ಉಳಿಯುತ್ತಾರೆ, ಆದ್ದರಿಂದ ನೀವು ಈಗ ಏನು ಮಾಡಬೇಕೆಂದು ಬಯಸುತ್ತೀರೋ ಅದನ್ನು ಮಾಡಿ.

---

ಈ ಯುದ್ಧದ ಪ್ರಮುಖ ಮತ್ತು ತಕ್ಷಣದ ಕಾರಣವೆಂದರೆ ಅವರು ಬಿಅ್‌ರ್ ಮಊನಾದಿಂದ ಹಿಂದಿರುಗಿದ ನಂತರ, ಹಝ್ರತ್ ಅಮ್ರು ಬಿನ್ ಉಮಯ್ಯ ಝುಮ್ರಿ(ರ) ರವರು ಬನೂ ಆಮಿರ್‌ನ ಇಬ್ಬರು ವ್ಯಕ್ತಿಯನ್ನು ಕೊಂದರು ಅವರಿಬ್ಬರು ಮುಸ್ಲಿಮರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು ಮತ್ತು ಈಗ ಇದು ಅವರ ದೀತ್‌ನ (ಪರಿಹಾರ ಧನದ) ವಿಷಯವಾಗಿತ್ತು.

**ಬನೂ ನಝೀ़ರ್ ಯುದ್ಧದ ಕಾರಣಗಳು ಮತ್ತು ಪರಿಸ್ಥಿತಿಗಳು ಹಾಗೂ ಘಟನೆಗಳ ವಿವರಾತ್ಮಕ ಪ್ರಸ್ತಾವನೆ ಮತ್ತು ಪಾಕಿಸ್ತಾನದ ಅಹ್ಮದಿಯರಿಗಾಗಿ ದುಆ ಮಾಡಲು ಮನವಿ**

ಪಾಕಿಸ್ತಾನದ ಅಹ್ಮದಿಯರನ್ನು ಇತ್ತೀಚಿಗೆ ಪುನಃ ಕಠಿಣವಾದ ಕಷ್ಟತೆಗಳಿಗೆ ಗುರಿಪಡಿಸಲಾಗುತ್ತಿದೆ. ಅಲ್ಲಾಹನು ಬೇಗನೇ ಪೀಡಕರಿಂದ ಮೋಕ್ಷ ನೀಡಲಿ. ಅಲ್ಲೂ ನಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳಲಿ. ಸಣ್ಣ ಪುಟ್ಟ ವಿಷಯಗಳಿಗೆ ಮೊಕದ್ದಮೆ ಹೂಡಲು ಮತ್ತು ತೊಂದರೆ ಕೊಡಲು ಪ್ರಯತ್ನಿಸಲಾಗುತ್ತಿದೆ.

---

ಸನ್ಮಾನ್ಯ ಬಶೀರ್ ಅಹ್ಮದ್ ಸಾಹಿಬ್‌ರ ಪುತ್ರ ಸನ್ಮಾನ್ಯ ಗ್ಹುಲಾಮ್ ಸರ್‌ವರ್ ಸಾಹಿಬ್ ಶಹೀದ್ ಮತ್ತು ಎರಡನೇ ಉಲ್ಲೇಖವು ಸನ್ಮಾನ್ಯ ಮುಶ್ತಾಖ್ ಅಹ್ಮದ್ ಬಾಜ್ವಾ ಸಾಹಿಬ್ ಅವರ ಪುತ್ರ ರಾಹತ್ ಅಹ್ಮದ್ ಬಾಜ್ವಾ ಸಾಹಿಬ್ ಸಅದುಲ್ಲಾಹ್‌ಪುರ ಮಂಡಿ ಬಹಾವುದ್ದೀನ್ ಮತ್ತು ಕೆನೆಡಾದ ಸನ್ಮಾನ್ಯ ಮಲಕ್ ಮುಝಫ್ಫರ್ ಅಹ್ಮದ್ ಜೊಈಯ ಸಾಹಿಬ್ ಅವರ ಸದ್ಗುಣಗಳ ಪ್ರಸ್ತಾವನೆ ಹಾಗೂ ನಮಾಝೆ ಜನಾಝ ಗಾಯಿಬ್ ನಿರ್ವಹಣೆ

---

ಸರ್ವಶಕ್ತನಾದ ಅಲ್ಲಾಹನು ಈ ಶಹೀದರಿಗೆ ಸ್ವರ್ಗದಲ್ಲಿ ಉನ್ನತ ಸ್ಥಾನವನ್ನು ನೀಡಲಿ. ರಹ್ಮತ್ ಹಾಗೂ ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಮತ್ತು ಎಲ್ಲಾ ದುಃಖಿತರಿಗೆ ತಾಳ್ಮೆಯನ್ನು ನೀಡಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **14-06-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعَالَمِيْنَ ـ اَلرَّحْمٰنِ الرَّحِيْمِ ـ مٰلِكِ يَوْمِ الدِّيْنِ ـ

اِيَّاكَ نَعْبُدُ وَاِيَّاكَ نَسْتَعِيْنُ ـ اِهْدِنَا الصِّرَاطَ الْمُسْتَقِيْمَ ـ

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ـ

ಇಂದು ಬನೂ ನಝೀ़ರ್ ಯುದ್ಧದ ಬಗ್ಗೆ ಸ್ವಲ್ಪ ಪ್ರಸ್ತಾಪಿಸುತ್ತೇನೆ. ಬನೂ ನಝೀ़ರ್ ಗೋತ್ರ ಮದೀನದ ಯಹೂದಿಯರ ಒಂದು ಕುಟುಂಬವಾಗಿತ್ತು. ಬನೂ ನಝೀ़ರ್ ಖೈಬರಿನ ಯಹೂದಿಗಳ ಒಂದು ಗೋತ್ರವಾಗಿತ್ತು ಎಂದು ಕೆಲವು ಚರಿತ್ರೆಗಾರರು ಬರೆದಿರುವರು. (ಸೀರತುಲ್ ಹಲಬೀಯಾ, ಸಂಪುಟ-2, ಪುಟ-356, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್ ಲೆಬನಾನ್)

ಹಝ್ರ़ತ್ ಪೈಗಂಬರ್(ಸ) ಮದೀನಕ್ಕೆ ಹೋದ ವೇಳೆ ನಝೀ़ರ್ ಗೋತ್ರದ ಸರದಾರ ಹಯ್ಯ್ ಬಿನ್ ಅಖ್‌ತಬ್ ಆಗಿದ್ದರು. ಅವರ ಪೂರ್ವಜರಲ್ಲಿ ಆರನೇಯ ಪೀಳಿಗೆಯಲ್ಲಿ ನಝೀರ್ ಬಿನ್ ನಹ್ಹಾಮ್ ಎಂಬವರ ಹೆಸರು ಉಲ್ಲೇಖಿಸಲಾಗುತ್ತದೆ ಅವರ ಹೆಸರಿನಿಂದಲೇ ಬನೂ ನಝೀರ್ ಗೋತ್ರವು ಪ್ರಸಿದ್ಧಿ ಹೊಂದಿದೆ. ಉಮ್ಮುಲ್ ಮೂಅ್‌ಮಿನೀನ್ ಸಫಿಯ(ರ) ಅವರ ಪುತ್ರಿಯಾಗಿದ್ದರು. ಹಯ್ಯ್ ಬಿನ್ ಅಖ್‌ತಬಿನ ವಂಶಾವಳಿ ಹಝ್ರ़ತ್ ಮೂಸಾ(ಅ)ರ ಸಹೋದರ ಹಝ್ರ़ತ್ ಹಾರೂನ್(ಅ)ರಿಗೆ ಹೋಗಿ ಸೇರುತ್ತದೆ ಎಂದು ಇತಿಹಾಸದಲ್ಲಿ ಬರೆಯಲಾಗಿದೆ. ಅದೇ ರೀತಿಯಲ್ಲಿ ಹಯ್ಯ್ ಬಿನ್ ಅಖ್‌ತಬಿನ ಪೂರ್ವಜರಲ್ಲಿ ಅನೇಕ ವ್ಯಕ್ತಿಗಳು ಪ್ರವಾದಿತ್ವದ ಪದವಿಯನ್ನು ಹೊಂದಿದ್ದರು. ಇದರ ಬಗ್ಗೆ ಆತನಿಗೆ ಬಹಳ ಅಹಂಕಾರವಿತ್ತು. ಆತನು ಹೀಗೆ ಹೇಳುತ್ತಿದ್ದನು: ಅಲ್ಲಾಹನು ನಮ್ಮ ಮೇಲೆ ಇಹಲೋಕದಲ್ಲೂ ಬಹಳ ಕೃಪೆದೋರಿದ್ದಾನೆ ಮತ್ತು ಪರಲೋಕದಲ್ಲೂ ಅವನು ನಮ್ಮ ಮೇಲೆ ಕೃಪೆದೋರುವನು. ಅವನು ನಮ್ಮ ಪಾಪಗಳಿಗೆ ಸ್ವಲ್ಪ ದಿನಗಳ ಶಿಕ್ಷೆ ನೀಡುವನು ಮತ್ತು ಕೊನೆಗೆ ಸ್ವರ್ಗವೇ ನಮ್ಮ ವಾಸಸ್ಥಳವಾಗಿರುವುದು. ಇದೇ ದುರಭಿಮಾನದ ಕಾರಣದಿಂದ ಹಯ್ಯ್ ಹಝ್ರ़ತ್ ಪೈಗಂಬರ್(ಸ)ರ ಬೋಧನೆಗಳಿಂದ ಮುಖ ತಿರುಗಿಸಿಕೊಂಡನು. (ದಾಎರಾ ಮುಆರಿಫ್ ಸೀರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಘುಟ-7, ಪುಟ-171-172, ಬಝ್ಮ್ ಇಖ್ಬಾಲ್ ಲಾಹೋರ್ 2022)

ಬನುನಝೀರ್ ಗೋತ್ರವು ಮಸ್ಜಿದ್ ಖುಬಾದಿಂದ ಈಶಾನ್ಯಕ್ಕೆ ಅರ್ಧ ಮೈಲಿ ದೂರದಲ್ಲಿದೆ ಮತ್ತು ಅದರ ಜನಸಂಖ್ಯೆಯು ಮಧ್ಯ ಮದೀನಾದಿಂದ ಮೊದಲು ಬರುತ್ತಿತ್ತು ಮತ್ತು ಮಸ್ಜಿದ್ ಖುಬಾವು ದಕ್ಷಿಣಕ್ಕೆ ಸ್ವಲ್ಪ ದೂರದಲ್ಲಿತ್ತು. (ದಾಎರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ-7, ಪುಟ 171-172, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ಬನೂ ನಝೀ़ರ್ ಯುದ್ಧ ಹಿಜರೀ 4, ರಬೀಉಲ್ ಅವ್ವಲ್ ತಿಂಗಳಲ್ಲಿ ನಡೆಯಿತು. ಈ ಯುದ್ಧ ಉಹುದ್ ಯುದ್ಧಕ್ಕೆ ಮುಂಚೆ ನಡೆದಿತ್ತು ಎಂಬ ಒಂದು ಹೇಳಿಕೆಯಿದೆ ಮತ್ತು ಇಮಾಮ್ ಬುಖಾರಿಯ ಹೇಳಿಕೆಯು ಸಹ ಇದೇ ಆಗಿದೆ. ಆದಾಗ್ಯೂ, ಇಬ್ನ್ ಇಸ್‌ಹಾಖ್ ಪ್ರಕಾರ ಈ ಯುದ್ಧವು ಉಹುದ್ ಯುದ್ಧ ಮತ್ತು ಬಿಅ್‌ರೆ ಮಊನಾದ ನಂತರ ನಡೆಯಿತು ಎಂದು ಇಮಾಮ್ ಬುಖಾರಿ ಸಹ ಅದೇ ಸ್ಥಳದಲ್ಲಿ ಬರೆದಿದ್ದಾರೆ. ಆದರೆ, ಅಲ್ಲಾಮಾ ಇಬ್ನ್ ಕಸೀರ್ ಮತ್ತು ಇತರ ಅನೇಕ ಇತಿಹಾಸಕಾರರು ಮತ್ತು ಜೀವನಚರಿತ್ರೆಕಾರರು ಬನುನಝೀರ್ ಯುದ್ಧವು ಉಹುದ್ ಯುದ್ಧದ ನಂತರವೇ ನಡೆಯಿತು ಎಂದು ಹೇಳಿದ್ದಾರೆ. (ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-357, ದಾರುಲ್ ಕುತುಬ್

ಇಲ್‌ಮಿಯಾ ಬೈರುತ್, ಲೆಬನಾನ್) (ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಮುಘಾಜಿ, ಬನೀ ಅಲ್–ನಝೀರ್‌ನ ಅಧ್ಯಾಯ ಹದೀಸ್...)

ಬನೂ ನಝೀರ್ ಯುದ್ಧದ ಕಾರಣಗಳ ಕುರಿತು ಹೀಗೆ ವಿವರಣೆಯಿದೆ. ಬದ್ರ್ ಯುದ್ಧಕ್ಕೆ ಮುಂಚೆ ಮಕ್ಕಾದ ಖುರೈಶಿಯರು ಅಬ್ದುಲ್ಲಾಹ್ ಬಿನ್ ಉಬಯ್ ಬಿನ್ ಸುಲೂಲ್, ಔಸ್ ಮತ್ತು ಖಿಝ್‌ರಜಿನ ವಿಗ್ರಹಾರಾಧಕರಿಗೆ ಹೀಗೆ ಪತ್ರ ಬರೆದರು: ಆ ಸಂದರ್ಭದಲ್ಲಿ ಹಝ್ರತ್ ಪೈಗಂಬರ್(ಸ) ಮದೀನದಲ್ಲಿಯೇ ಇದ್ದರು ಆಗ ನೀವು ನಮ್ಮ ಜೊತೆಗಾರನಿಗೆ ಅಭಯ ನೀಡಿದ್ದೀರಿ. ಮದೀನದಲ್ಲಿ ನೀವು ಹೆಚ್ಚಿನ ಸಂಖ್ಯೆಯಲ್ಲಿದ್ದೀರಿ. ನಾವು ಆಣೆ ಹಾಕಿ ಹೇಳುತ್ತೇವೆ, ಒಂದೋ ನೀವು ಅವರ ಎದುರಾಗಿ ಯುದ್ಧ ಮಾಡಿರಿ ಅಥವಾ ಅವರನ್ನು ನಿಮ್ಮ ಪಟ್ಟಣದಿಂದ ಹೊರಕ್ಕೆ ಅಟ್ಟಿರಿ. ಇಲ್ಲದಿದ್ದರೆ ನಾವು ಪೂರ್ತಿ ಅರೇಬಿಯರೊಂದಿಗೆ ನಿಮ್ಮ ಮೇಲೆ ದಾಳಿ ನಡೆಸುವೆವು. ನಿಮ್ಮ ಸೈನಿಕರೊಂದಿಗೆ ಯುದ್ಧವಾಡುತ್ತೇವೆ. ನಿಮ್ಮ ಮಹಿಳೆಯರಿಗೆ ಹಾಗೂ ಮಕ್ಕಳಿಗೆ ತಲೆತಗ್ಗಿಸುವಂತೆ ಮಾಡುತ್ತೇವೆ. ಉಬಯ್ ಬಿನ್ ಸುಲೂಲ್ ಮತ್ತು ಇತರ ವಿಗ್ರಹಾರಾಧಕರಿಗೆ ಈ ಪತ್ರ ಲಭಿಸಿದಾಗ ಅವರು ಪರಸ್ಪರ ಸಂದೇಶ ಕಳುಹಿಸಿ ಹಝ್ರತ್ ಪೈಗಂಬರ್(ಸ)ರ ವಿರುದ್ಧ ಯುದ್ಧ ಮಾಡಲು ದೃಢನಿರ್ಧಾರ ಮಾಡಿಕೊಂಡರು. ಹಝ್ರತ್ ಪೈಗಂಬರ್(ಸ)ರಿಗೆ ಇದರ ಬಗ್ಗೆ ಮಾಹಿತಿ ಲಭಿಸಿದಾಗ ಹಝ್ರತ್ ಪೈಗಂಬರ್(ಸ) ಸಹಾಬಿಯರ ಒಂದು ಸಂಘದೊಂದಿಗೆ ಅವರನ್ನು ಭೇಟಿಯಾದರು ಮತ್ತು ಅವರೊಡನೆ ಹೀಗೆ ಹೇಳಿದರು: ಖುರೈಶಿಯರು ನಿಮಗೆ ಬೆದರಿಕೆಯ ಪತ್ರವನ್ನು ಬರೆದಿರುವರು. ಈ ಪತ್ರ ನಿಮ್ಮನ್ನು ಮೋಸಗೊಳಿಸದಿರಲಿ. ನೀವು ಮೋಸಗಾರಿಕೆಗೆ ತುತ್ತಾಗಿ ತಮ್ಮದೇ ಸಹೋದರರ ಮತ್ತು ಮಕ್ಕಳ ವಿರುದ್ಧ ಯುದ್ಧ ಮಾಡಬೇಡಿರಿ. ಹಝ್ರತ್ ಪೈಗಂಬರ್(ಸ)ರ ಈ ಮಾತನ್ನು ಅವರ ಸರದಾರರು ಮನವರಿಕೆ ಮಾಡಿಕೊಂಡರು ಮತ್ತು ತಮ್ಮ ನಿರ್ಧಾರವನ್ನು ಮುಂದೂಡಿದರು. ಹೀಗೆ ಖುರೈಶರ ಬೆದರಿಕೆಯು ಪರಿಣಾಮಕಾರಿಯಾಗಲಿಲ್ಲ.

ಅನಂತರ ಖುರೈಶಿಯರು ಬದ್ರ್ ಯುದ್ಧದ ನಂತರ ಯಹೂದಿಯರಿಗೆ ಹೀಗೊಂದು ಪತ್ರ ಬರೆದರು: ನಿಮ್ಮ ಬಳಿ ಆಯುಧಗಳಿವೆ ಮತ್ತು ನೀವು ಕೋಟೆಗಳ ಮಾಲಿಕರಾಗಿದ್ದೀರಿ. ಆದ್ದರಿಂದ ನೀವು ನಮ್ಮ ಜೊತೆಗಾರನ ವಿರುದ್ಧ ಯುದ್ಧ ಮಾಡಿರಿ. ಇಲ್ಲದಿದ್ದರೆ ನಾವು ನಿಮ್ಮ ಮೇಲೆ ದಾಳಿ ನಡೆಸುವೆವು. ಮತ್ತು ನಿಮ್ಮ ಪುರುಷರನ್ನು ವಧಿಸಿ ನಿಮ್ಮ ಮಹಿಳೆಯರಿಗೆ ದಾಸಿಯರನ್ನಾಗಿ ಮಾಡಿಕೊಳ್ಳುತ್ತೇವೆ. ಈ ಪತ್ರ ಯಹೂದಿಗಳಿಗೆ ಮುಟ್ಟಿದಾಗ ಬನೂ ನಝೀರ್ ಗೋತ್ರದವರು ಹಝ್ರತ್ ಪೈಗಂಬರ್(ಸ)ರನ್ನು ಮೋಸಮಾಡಲು ತೀರ್ಮಾನಿಸಿದರು. ಏಕೆಂದರೆ ಯಹೂದಿಯರ ಗೋತ್ರಗಳು ಮುಸ್ಲಿಮರ ಶಕ್ತಿಯನ್ನು ದುರ್ಬಲಗೊಳಿಸಲು ಹಾಗೂ ಅವರನ್ನು ನಾಶಗೊಳಿಸಲು ಇಂತಹ ಸಂದರ್ಭಕ್ಕಾಗಿ ಕಾಯುತ್ತಿದ್ದರು. ಆದ್ದರಿಂದ ಬನೂ ನಝೀರ್ ಗೋತ್ರದವರು ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಪತ್ರ ಬರೆದರು. ನೀವು ನಿಮ್ಮ ಮೂವತ್ತು ಸಂಗಡಿಗರ ಜೊತೆಗೆ ನಮ್ಮ ಬಳಿಗೆ ಬನ್ನಿರಿ. ನಮ್ಮ ಮೂವತ್ತು ಪಂಡಿತರು ಕೂಡ ಬರುವರು. ನಮ್ಮ ಪಂಡಿತರು ನಿಮ್ಮನ್ನು ಸತ್ಯಪಡಿಸಿ ನಿಮ್ಮಲ್ಲಿ ವಿಶ್ವಾಸ ಕೈಗೊಂಡರೆ ನಾವು ಸಹ ನಿಮ್ಮಲ್ಲಿ ವಿಶ್ವಾಸ ಕೈಗೊಳ್ಳುವೆವು. ಹಾಗೆ ಮರುದಿನ ಹಝ್ರತ್ ಪೈಗಂಬರ್(ಸ) ಅವರ ಬಳಿಗೆ ಮೂವತ್ತು ಸಂಗಡಿಗರ ಜೊತೆಗೆ ಹೊರಟರು. ಮೂವತ್ತು ಯಹೂದಿ ಪಂಡಿತರು ಸಹ ಹಝ್ರತ್ ಪೈಗಂಬರ್(ಸ)ರ ಬಳಿಗೆ ಬಂದರು. ಯಹೂದಿಯರು ಒಂದು ತೆರೆದ ಮೈದಾನಕ್ಕೆ ಬಂದು ಮುಟ್ಟಿದಾಗ ಅವರು ಪರಸ್ಪರ ಹೀಗೆ ಹೇಳಿಕೊಂಡರು: ಅವರ ಜೊತೆಗೆ ಮೂವತ್ತು ಸಂಗಡಿಗರು ಇರುವಾಗ ನಾವು ಅವರ ಮೇಲೆ ಹೇಗೆ ದಾಳಿ ನಡೆಸುವುದು? ಆದ್ದರಿಂದ ಯಹೂದಿಯರು ಪರಸ್ಪರ ಸಮಾಲೋಚನೆ ನಡೆಸಿದರು ಮತ್ತು ಹಝ್ರತ್ ಪೈಗಂಬರ್(ಸ)ರಿಗೆ ಹೀಗೆ ಸಂದೇಶ ಕಳುಹಿಸಿದರು: ನೀವು ಮೂವರು ಪಂಡಿತರ ಜೊತೆಗೆ ಬನ್ನಿರಿ. ನಮ್ಮ ಕಡೆಯಿಂದಲೂ ಮೂವರು ಪಂಡಿತರು ಇರುವರು. ಹೀಗೆ ಹಝ್ರತ್ ಪೈಗಂಬರ್(ಸ) ಮೂವರು ಪಂಡಿತರ ಜೊತೆಗೆ ಹೊರಟರು. ಯಹೂದಿಯರ ಮೂವರು ಪಂಡಿತರ ಬಳಿ ಚಾಕುಗಳಿದ್ದುವು. ಅವರು ಹಝ್ರತ್ ಪೈಗಂಬರ್(ಸ)ರ ಮೇಲೆ ಹಲ್ಲೆ ಮಾಡಲು ಯೋಜಿಸಿದ್ದರು. ಆದರೆ ಯಹೂದಿಯರಲ್ಲಿ ಹಿತಕಾಂಕ್ಷಿ ಮಹಿಳೆಯೊಬ್ಬಳು ಒಬ್ಬ ಅನ್ಸಾರಿ ಸಹಾಬಿಗೆ ಯಹೂದಿಯರ ಎಲ್ಲ ಯೋಜನೆಯ ಬಗ್ಗೆ ತಿಳಿಸಿದಳು. ಹೀಗೆ ಹಝ್ರತ್ ಪೈಗಂಬರ್(ಸ)ರವರು ಯಹೂದಿಯರ ಬಳಿ ಹೋಗದೆ ಮದೀನಕ್ಕೆ ಹೊಂದಿರುಗಿದರು.

(ಸಬ್ಲುಲ್ ಹುದಾ ವರ್‌ರಶಾದ್, ಸಂಪುಟ–4, ಪುಟ–317, ದಾರುಲ್ ಕುತುಬ್ ಇಲ್ಮಿಯಾ ಬೈರುತ್ ಲೆಬನಾನ್ 1993)

ಈ ಯುದ್ಧಕ್ಕೆ ಇನ್ನೊಂದು ಕಾರಣವನ್ನು ವಿವರಿಸುತ್ತಾ ಓರ್ವ ಲೇಖಕರು ಹೀಗೆ ಬರೆದಿದ್ದಾರೆ: ಬನುನಝೀರ್ ಖುರೈಶಿಗಳಿಗೆ ರಹಸ್ಯವಾಗಿ ಸಂದೇಶವನ್ನು ಕಳುಹಿಸಿದರು ಮತ್ತು ಅವರಿಗೆ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಯುದ್ಧವಾಡಲು ಪ್ರಚೋದಿಸಿದರು, ಅವರೊಂದಿಗೆ ಅವರಿಗೆ ಮುಸ್ಲಿಮರ ಕೆಲವು ರಕ್ಷಣಾ ದೌರ್ಬಲ್ಯಗಳನ್ನು ತಿಳಿಸಿದನು. ಇದು ಖುರೈಶರು ಮುಸಲ್ಮಾನರ ವಿರುದ್ಧ ಯುದ್ಧವಾಡಲು ಉಹದ್ ಬಳಿ ಬೀಡುಬಿಟ್ಟಿದ್ದ ಸಮಯದ ವಿಷಯವಾಗಿತ್ತು. ಈ ಕಾರಣವನ್ನು ಮೂಸಾ ಬಿನ್ ಉಕ್ಬಾ ಮಾತ್ರ ಉಲ್ಲೇಖಿಸಿದ್ದಾರೆ. ಕೆಲವು ವರದಿಗಳ ಪ್ರಕಾರ, ಉಹುದ್ ಯುದ್ಧದ ಮೊದಲು, ಯಹೂದಿಗಳು ಮಕ್ಕಾದ ಖುರೈಶರನ್ನು ಸಹ ಪ್ರಚೋದಿಸಿದರು, ಇದರ ಪರಿಣಾಮವಾಗಿ ಉಹುದ್ ಯುದ್ಧ ನಡೆಯಿತು.

(ದಾಏರಾ ಮುಆರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್, ಸಂಪುಟ–7, ಪುಟ–175–176, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ಈ ಯುದ್ಧದ ಪ್ರಮುಖ ಮತ್ತು ತಕ್ಷಣದ ಕಾರಣವೆಂದರೆ ಅವರು ಬಿಅರ್ ಮಊನಾದಿಂದ ಹಿಂದಿರುಗಿದ ನಂತರ, ಹಝ್ರತ್ ಅಮ್ರು ಬಿನ್ ಉಮಯ್ಯ ಝುಮ್ರಿ(ರ) ರವರು ಬನೂ ಆಮಿರ್‌ನ ಇಬ್ಬರು ವ್ಯಕ್ತಿಯನ್ನು ಕೊಂದರು ಅವರಿಬ್ಬರು ಮುಸ್ಲಿಮರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು ಮತ್ತು ಈಗ ಇದು ಅವರ ದೀತ್‌ನ (ಪರಿಹಾರ ಧನದ) ವಿಷಯವಾಗಿತ್ತು. ಈ ನಿಟ್ಟಿನಲ್ಲಿ, ಹಝ್ರತ್ ಪೈಗಂಬರ್(ಸ) ಬನೂನಝೀರ್‌ಗೆ ಭೇಟಿ ನೀಡಿದರು. (ಸಿರತ್ ಅಲ್–ಹಲ್ಬಿಯಾಹ್, ಸಂಪುಟ–2, ಪುಟ–357, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್) ಏಕೆಂದರೆ ಹಝ್ರತ್ ಪೈಗಂಬರ್(ಸ)ರು ಯಹೂದಿಯರೊಂದಿಗೆ ಮಾಡಿಕೊಂಡಿದ್ದ ಒಪ್ಪಂದದ ಒಂದು ಷರತ್ತು ಹೀಗೂ ಇತ್ತು **ಅನ್ ಯುಆವಿನುಹು ಫಿದ್ದಿಯಾತಿ** ಅಂದರೆ: ಅವರು ಮುಸ್ಲಿಮರೊಂದಿಗೆ ದೀತ್‌ನ (ಪರಿಹಾರ ಧನದ) ವಿಷಯಗಳಲ್ಲಿ ಸಹಕರಿಸುತ್ತಾರೆ. (ದಾಏರಾ ಮಾರಿಫ್ ಸೀರತ್ ಮುಹಮ್ಮದ್ ರಸೂಲುಲ್ಲಾಹ್ ಸಲ್ಲಲ್ಲಾಹು ಅಲೈಹಿ ವ ಸಲ್ಲಂ, ಸಂಪುಟ–7, ಪುಟ–172, ಬಿಜ್ಮ್ ಇಕ್ಬಾಲ್, ಲಾಹೋರ್, 2022)

ಈ ಘಟನೆಯ ವಿವರಣೆಯು ಬಿಅರ್ ಮಊನಾದ ವಿವರಣೆಯಲ್ಲಿ ಈಗಾಗಲೇ ವಿವರಿಸಿದಂತೆ, ಹಝ್ರತ್ ಅಮ್ರು ಬಿನ್ ಉಮಯ್ಯ ಝುಮ್ರಿ(ರ) ಬಿಅರ್ ಮಊನಾದಿಂದ ಮದೀನಾಕ್ಕೆ ಹಿಂದಿರುಗುತ್ತಿದ್ದರು. ಅವರು ಖನಾತ್ ಸ್ಥಳಕ್ಕೆ ತಲುಪಿದಾಗ. ಖನಾತ್ ಮದೀನಾ ಮತ್ತು ಉಹದ್ ನಡುವಿನ ಮದೀನಾದ ಮೂರು ಪ್ರಸಿದ್ಧ ಕಣಿವೆಗಳಲ್ಲಿ ಒಂದಾಗಿದೆ, ಅಲ್ಲಿ ಕೃಷಿ ಮಾಡಲಾಗುತ್ತಿತ್ತು, ಅಲ್ಲಿ ಬನೂ ಆಮಿರ್‌ನ ಇಬ್ಬರು ಜನರು ಅವರನ್ನು ಭೇಟಿಯಾದರು. ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಹಝ್ರತ್ ಅಮ್ರ್(ರ) ಅವರ ಪೂರ್ವಜರ ಬಗ್ಗೆ ಕೇಳಿದರು, ಅದಕ್ಕೆ ಅವರಿಬ್ಬರೂ ತಮ್ಮ ಪೂರ್ವಜರ ಬಗ್ಗೆ ತಿಳಿಸಿದರು. ಈ ಇಬ್ಬರು ಜನರು ಅವನೊಂದಿಗೆಯೇ ಉಳಿದರು. ನಂತರ ಅವರಿಬ್ಬರೂ ನಿದ್ರಿಸಿದಾಗ ಹಝ್ರತ್ ಅಮ್ರ್ ಬಿನ್ ಉಮಯ್ಯ ಝುಮ್ರಿ(ರ) ಅವರ ಮೇಲೆ ದಾಳಿ ಮಾಡಿ ಕೊಂದರು. ನಂತರ ಶೀಘ್ರದಲ್ಲೇ ಅವರು ಹಝ್ರತ್ ಪೈಗಂಬರ್(ಸ)ರ ಸೇವೆಗೆ ಬಂದು ಘಟನೆಯ ಸಂಪೂರ್ಣ ವಿವರಣೆ ನೀಡಿದರು. ಅದಕ್ಕೆ ಹಝ್ರತ್ ಪೈಗಂಬರ್(ಸ) ಹೇಳಿದರು: ನೀವು ತುಂಬಾ ಕೆಟ್ಟ ಕೆಲಸ ಮಾಡಿದ್ದೀರಿ. ಅವರು ನಮ್ಮೊಂದಿಗೆ ಒಪ್ಪಂದ ಮತ್ತು ಅಭಯವನ್ನು ಹೊಂದಿದ್ದರು. ಹಝ್ರತ್ ಅಮ್ರ್ ಬಿನ್ ಉಮಯ್ಯ ಝುಮ್ರಿ(ರ) ಹೇಳಿದರು, ಈ ಒಪ್ಪಂದದ ಬಗ್ಗೆ ನನಗೆ ತಿಳಿದಿರಲಿಲ್ಲ. ನಾನು ಅವರನ್ನು ಬಹುದೇವತಾವಾದಿಗಳೆಂದು ಪರಿಗಣಿಸಿದೆ. ಅವರ ಸಮುದಾಯದ ಜನರು ನಮಗೆ ದ್ರೋಹ ಮಾಡಿದರು. ಹಝ್ರತ್ ಅಮ್ರ್(ರ) ಅವರು ಅವರ ಸರಕು ಮತ್ತು ಬಟ್ಟೆಗಳನ್ನು ಸಹ ತಮ್ಮೊಂದಿಗೆ ತಂದಿದ್ದರು. ಹಝ್ರತ್ ಪೈಗಂಬರ್(ಸ)ರು ಮೃತರ ಕುಟುಂಬದವರಿಗೆ ಅವರ ಸರಕುಗಳು ಹಾಗೂ ಬಟ್ಟೆಗಳನ್ನೆಲ್ಲ ಹಿಂದಿರುಗಿಸಲು ಆದೇಶಿಸಿದರು. ಹಝ್ರತ್ ಪೈಗಂಬರ್(ಸ)ರು ಈ ಸರಕುಗಳನ್ನು ದೀತ್ (ಪರಿಹಾರ ಧನ) ನೊಂದಿಗೆ ಕಳುಹಿಸಿದರು. ತದನಂತರ, ಹಝ್ರತ್ ಪೈಗಂಬರ್(ಸ)ರು ಶನಿವಾರ ದಿವಸ ಬನೂನಝೀರರ ಬಳಿಗೆ ಹೋದರು. ಖುಬಾ ಮಸೀದಿಯಲ್ಲಿ ನಮಾಝ್ ನಿರ್ವಹಿಸಿದರು. ಮುಹಾಜಿರೀನರಲ್ಲಿ ಹಾಗೂ ಅನ್ಸಾರ್‌ಗಳಲ್ಲಿ, ಹಝ್ರತ್ ಪೈಗಂಬರ್(ಸ) ಅವರ ಕೆಲವು ಸಹಾಬೀಯರು ಅವರೊಂದಿಗೆ ಇದ್ದರು. ಹಝ್ರತ್ ಪೈಗಂಬರ್(ಸ) ಬನೂನಝೀರ್ ತಲುಪಿದಾಗ ಅವರೊಂದಿಗೆ ಹತ್ತಕ್ಕಿಂತ ಕಡಿಮೆ ಸಹಾಬೀಯರು ಇದ್ದರು. ಹಝ್ರತ್ ಪೈಗಂಬರ್(ಸ)ರು ಅವರನ್ನು ಅವರ ಸಭೆಯಲ್ಲಿ ಕುಳಿತಿರುವುದನ್ನು ಕಂಡರು. ಹಝ್ರತ್ ಅಮ್ರ್‌ನಿಂದ ಕೊಲ್ಲಲ್ಪಟ್ಟ ಇಬ್ಬರ ಮರಣದಂಡವನ್ನು ಪಾವತಿಸಲು ಹಝ್ರತ್ ಪೈಗಂಬರ್(ಸ)ರು

ಅವರೊಂದಿಗೆ ಚರ್ಚಿಸಲು ಕುಳಿತುಕೊಂಡರು. (ಸ್‌ಬ್ಲ್ಲಲ್ ಹುದಾ ವರ್ರಶ್ಶಾದ್, ಸಂಪುಟ-4, ಪುಟ-318, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್, 1993) (ಝೋರ್ ಅಕಾಡೆಮಿ ಕರಾಚಿ ಪ್ರಕಟಿಸಿದ ಫರ್ಹಾಂಗ್-ಎ-ಸೀರತ್ ಪುಟ-239)

ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ಈ ಯುದ್ಧದ ಕಾರಣಗಳ ಬಗ್ಗೆ ಬರೆದಿದ್ದಾರೆ, ಇದು ಇನ್ನೂ ಕೆಲವು ವಿವರಣೆಯನ್ನು ನೀಡುತ್ತದೆ: "ಈ ಯುದ್ಧದ ಕಾರಣವನ್ನು ವಿವರಿಸುತ್ತಾ, ಹದೀಸ್‌ನ ನಿರೂಪಕರು ಹಾಗೂ ಜೀವನಚರಿತ್ರೆಯ ಲೇಖಕರು ವಿಭಿನ್ನ ಕಾರಣಗಳನ್ನು ನೀಡುತ್ತಾರೆ ಮತ್ತು ಈ ಭಿನ್ನಭಿಪ್ರಾಯದಿಂದಾಗಿ, ಈ ಯುದ್ಧದ ಸಮಯದ ಬಗ್ಗೆಯು ಭಿನ್ನಭೀಪ್ರಾಯ ಉಂಟಾಗಿದೆ, ಹಝ್ರತ್ ಮಿಂಯಾಂ ಸಾಹಿಬ್(ರ) ಬರೆಯುತ್ತಾರೆ: ಯಾವುದೇ ವಿಶೇಷ ಸಂಶೋಧನೆಯಿಲ್ಲದೆ ನಾನು ಇಬ್ನ್ ಇಸ್‌ಹಾಖ್ ಮತ್ತು ಇಬ್ನ್ ಸಾಅದ್ ಅವರನ್ನು ಅನಿಸರಿಸಿದ್ದೇನೆ. ಬನೂನಝೀರ್ ಯುದ್ಧವನ್ನು ಉಹುದ್ ಯುದ್ಧ ನತ್ತು ಬಿಅ್‌ರೆ ಮಊನಾದ ಘಟನೆಯ ನಂತರ ವಿವರಿಸುತ್ತಾರೆ ಮತ್ತು ಇದಕ್ಕೆ ಕಾರಣ ಬಿಅ್‌ರ್ ಮಊನಾದ ಸಂದರ್ಭದಲ್ಲಿ ಅವಿಶ್ವಾಸಿಗಳಿಂದ ಸೆರೆಯಲ್ಲಿದ್ದ ಮತ್ತು ಬಿಡುಗಡೆಯಾದ ಅಮರ್ ಬಿನ್ ಉಮಯ್ಯ ಝುಮ್ರಿ(ರ) ಅವರು ಮದೀನಾಗೆ ಹಿಂದಿರುಗಿದಾಗ, ಅವರು ಹಝ್ರತ್ ಪೈಗಂಬರ್(ಸ)ರೊಂದಿಗೆ ಒಪ್ಪಂದ ಮಾಡಿಕೊಂಡಿದ್ದ ಬನೂಆಮಿರ್ ಗೋತ್ರದ ಇಬ್ಬರು ವ್ಯಕ್ತಿಗಳನ್ನು ಭೇಟಿಯಾದರು. ಈ ಒಪ್ಪಂದದ ಬಗ್ಗೆ ಅಮ್ರ್(ರ) ತಿಳಿದಿರಲಿಲ್ಲವಾದ್ದರಿಂದ, ಬನೂ ಆಮಿರ್ ಗೋತ್ರದ ಮುಖ್ಯಸ್ಥ ಆಮಿರ್ ಬಿನ್ ತುಫೈಲ್ ಅವರ ಹತ್ಯೆಗೆ ಕಾರಣವಾದ ಬಿಅ್‌ರ್ ಮಊನಾದ ಹುತಾತ್ಮರಿಗೆ ಬದಲಾಗಿ ಈ ಇಬ್ಬರನ್ನು ವಧಿಸಲು ಅವರು ಅವಕಾಶವನ್ನು ಪಡೆದುಕೊಂಡರು. ಸ್ವತಃ ಬನೂ ಆಮಿರ್ ಗೋತ್ರದ ಜನರು ಸಹ ಈ ಹತ್ಯಾಕಾಂಡವನ್ನು ತ್ಯಜಿಸಿದರು." ಅವರು ಯುದ್ಧ ಮಾಡಿರಲಿಲ್ಲ ಆದರೆ ಅವರಿಗೆ ಇವರು (ಬನೂ ಆಮಿರ್)ರವರು ಮೋಸಮಾಡಿದ್ದಾರೆ ಎಂದು ಭಾವಿಸಿ ಇವರು ನಮ್ಮ ಶತ್ರಗಳು ಎಂದು ಅವರಿಗೆ ವಧಿಸಿದರು. ಅಮ್ರ್ ಇಬ್ನ್ ಉಮಯ್ಯ(ರ) ಅವರು ಮದೀನಾಗೆ ತಲುಪಿದಾಗ, ಅವರು ಇಡೀ ಘಟನೆಯನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ವಿವರಿಸಿದರು ಮತ್ತು ಈ ಇಬ್ಬರು ವ್ಯಕ್ತಿಗಳನ್ನು ಕೊಂದ ಘಟನೆಯನ್ನು ವಿವರಿಸಿದರು. ಈ ಇಬ್ಬರು ವ್ಯಕ್ತಿಗಳ ಹತ್ಯೆಯ ಬಗ್ಗೆ ಹಝ್ರತ್ ಪೈಗಂಬರ್(ಸ) ಅವರಿಗೆ ತಿಳಿಸಿದಾಗ, ಅವರು (ಸ) ಅಮ್ರ್ ಬಿನ್ ಉಮಯ್ಯ(ರ) ಅವರ ಈ ಕ್ರಿಯೆಯಿಂದ ಬಹಳ ಕೋಪಗೊಂಡರು ಮತ್ತು ಅವರು ನಮ್ಮ ಪ್ರತಿಜ್ಞಾಬದ್ಧರು ಎಂದು ಹೇಳಿದರು ಮತ್ತು ಹಝ್ರತ್ ಪೈಗಂಬರ್(ಸ) ತಕ್ಷಣವೇ ವಧಿಸಲ್ಪಟ್ಟವರ ಪರಿಹಾರ ಧನವನ್ನು ಅವರ ಸಂಬಂಧಿಕರಿಗೆ ಕಳುಹಿಸಿದರು. ಆದರೆ ಒಪ್ಪಂದದ ಪ್ರಕಾರ, ಬನೂ ಆಮಿರ್‌ನ ಜನರು ಬನೂ ನಝೀರಿನ ಮಿತ್ರರಾಗಿದ್ದರು ಮತ್ತು ಬನೀ ನಝೀರ್ ಮುಸ್ಲಿಮರ ಮಿತ್ರರಾಗಿದ್ದರು. ಆದ್ದರಿಂದ ಒಪ್ಪಂದದ ಪ್ರಕಾರ ಪರಿಹಾರ ಧನದ ಒಂದು ಪಾಲು ಬನೂ ನಝೀರ್‌ನಿಂದ ಪಡೆಯಬೇಕಾಗಿತ್ತು. ಆದ್ದರಿಂದ ಹಝ್ರತ್ ಪೈಗಂಬರ್(ಸ) ತನ್ನ ಕೆಲವು ಸಂಗಡಿಗರ ಜೊತೆಗೆ ಬನೂ ನಝೀರ್ ನೆಲೆಸಿದ್ದ ಸ್ಥಳಕ್ಕೆ ತಲುಪಿದರು ಮತ್ತು ಪರಿಹಾರ ಧನದ ಪಾಲನ್ನು ಅವರಿಂದ ಅವಶ್ಯಪಟ್ಟರು.

ನಂತರ ಅವರು ಬರೆಯುತ್ತಾರೆ "... ಇದು ಹೆಚ್ಚಿನ ಇತಿಹಾಸಕಾರರು ಅನುಸರಿಸುತ್ತಿರುವ ವರದಿಯಾಗಿದೆ. ಈ ವರದಿಯನ್ನು ಸಾಮಾನ್ಯವಾಗಿ ಇತಿಹಾಸದಲ್ಲಿ ಪ್ರಕಟಿಸಲಾಗಿದೆ ಮತ್ತು ಪರಿಚಯಿಸಲಾಗಿದೆಯಾದರೂ, ಆದರೆ ಇದಕ್ಕೆ ವಿರುದ್ಧವಾಗಿ, ಇಮಾಮ್ ಝುಹ್‌ರಿ ಅವರ ಈ ವರದಿಯು ಅಧಿಕೃತ ಹದೀಸ್‌ಗಳಲ್ಲಿ ದಾಖಲಾಗಿದೆ, ಅಂದರೆ ಬದ್ರ್ ಯುದ್ಧದ ನಂತರ, ಮಕ್ಕಾದಲ್ಲಿ ಯಾವ ವರ್ಷ ಮತ್ತು ಯಾವ ತಿಂಗಳು ಎಂದು ಹೇಳಲಾಗುವುದಿಲ್ಲ. ಮಕ್ಕಾದ ಮುಖ್ಯಸ್ಥರು ಬನೂ ನಝೀರ್‌ಗೆ ಹೀಗೆ ಪತ್ರವನ್ನು ಬರೆದರು: ನೀವು ಮುಹಮ್ಮದ್(ಸ.ಅ) ಮತ್ತು ಮುಸ್ಲಿಮರ ವಿರುದ್ಧ ಹೋರಾಡಿ, ಇಲ್ಲದಿದ್ದರೆ ನಾವು ನಿಮ್ಮ ವಿರುದ್ಧ ಹೋರಾಡುತ್ತೇವೆ. ಅದಕ್ಕೆ ಬನೂನಝೀರ್ ಪರಸ್ಪರ ಸಮಾಲೋಚಿಸಿ ಹಝ್ರತ್ ಪೈಗಂಬರ್(ಸ) ರನ್ನು ಕೆಲವು ತಂತ್ರದಿಂದ ವಧಿಸಲು ನಿರ್ಧರಿಸಿದರು ಮತ್ತು ಇದಕ್ಕಾಗಿ ಅವರನ್ನು ಯಾವುದಾದರೂ ನೆಪದಲ್ಲಿ ಅವರ ಬಳಿಗೆ ಕರೆಸಿ ಅಲ್ಲಿಯೇ ವಧಿಸಬೇಕೆಂದು ಸೂಚಿಸಿದರು. ಆದುದರಿಂದ ಅವರು ಹಝ್ರತ್ ಪೈಗಂಬರ್(ಸ) ಅವರನ್ನು ಹೀಗೆ ಸಂದೇಶ ನೀಡಿದರು: ನೀವು ನಮ್ಮ ವಿದ್ವಾಂಸರೊಂದಿಗೆ ಧಾರ್ಮಿಕ ಚರ್ಚೆಯನ್ನು ಮಾಡಬೇಕು. ನಿಮ್ಮ ಸತ್ಯಾಸತ್ಯತೆಯು ನಮ್ಮ ಮೇಲೆ ಸ್ಪಷ್ಟವಾದರೆ ನಾವು ನಿಮ್ಮನ್ನು ಒಪ್ಪಿಕೊಳ್ಳುತ್ತೇವೆ. ಆದ್ದರಿಂದ ದಯವಿಟ್ಟು ನೀವು ನಿಮ್ಮ ಮೂವತ್ತು ಮಂದಿ ಸಹಾಬೀಯರನ್ನು ಕರೆತನ್ನಿ. ನಮ್ಮ ಕಡೆಯಿಂದ ಮೂವತ್ತು ಮಂದಿ ವಿದ್ವಾಂಸರು ಬರುತ್ತಾರೆ ನಂತರ ವಿಚಾರ ವಿನಿಮಯ ನಡೆಯುತ್ತದೆ. ಒಂದೆಡೆ, ಅವರು ಈ ಸಂದೇಶವನ್ನು ಹಝ್ರತ್ ಪೈಗಂಬರ್(ಸ) ಅವರಿಗೆ ಕಳುಹಿಸಿದರು ಮತ್ತು ಮತ್ತೊಂದೆಡೆ, ಅವರು ಹಝ್ರತ್ ಪೈಗಂಬರ್(ಸ) ಬಂದಾಗ, ರಹಸ್ಯವಾಗಿ ಚಾಕುಗಳನ್ನು ಹೊಂದಿರುವ ಈ ಯಹೂದಿ ವಿದ್ವಾಂಸರು ಸಂದರ್ಭ ಪಡೆದು ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ದೃಢ ಸಂಕಲ್ಪ ಹೊಂದಿದ್ದರು. ಆದರೆ ಬನೂ ನಝೀರಿನ ಓರ್ವ ಮಹಿಳೆಯು ತನ್ನ ಗೋತ್ರದ ಯೋಜನೆಯ ಬಗ್ಗೆ ಓರ್ವ ಅನ್ಸಾರಿ ಸಹಾಬಿಯನ್ನು ತಿಳಿಸಿದಳು. ಹಝ್ರತ್ ಪೈಗಂಬರ್(ಸ)ರಿಗೆ ಈ ರಹಸ್ಯ ಯೋಜನೆಯ ಬಗ್ಗೆ ಗೊತ್ತಾದಾಗ ಹಝ್ರತ್ ಪೈಗಂಬರ್(ಸ) ತನ್ನ ಸಂಗಡಿಗರ ಜೊತೆಗೆ ಯಹೂದಿಯರ ಕೋಟೆಗಳ ಬಳಿಗೆ ಹೊರಟು ಹೋಗಿ ಮುತ್ತಿಗೆ ಹಾಕಿದರು ಹಾಗೂ ಹೀಗೆ ಸಂದೇಶ ನೀಡಿದರು: ಈಗ ಇರುವ ಪರಿಸ್ಥಿತಿಯಲ್ಲಿ ನೀವು ಪುನಃ ಹೊಸದಾಗಿ ನನ್ನೊಂದಿಗೆ ಒಪ್ಪಂದ ಮಾಡಿಕೊಂಡು ಇನ್ನು ಮುಂದೆ ಒಪ್ಪಂದದ ಉಲ್ಲಂಘನೆ ಮಾಡುವುದಿಲ್ಲ ಮತ್ತು ಮೋಸ ಮಾಡುವುದಿಲ್ಲ ಎಂದು ನನಗೆ ಖಚಿತಪಡಿಸಿದ ಹೊರತು ನಾನು ನಿಮ್ಮನ್ನು ಮದೀನದಲ್ಲಿ ಇರಲು ಬಿಡುವಂತಿಲ್ಲ. ಆದರೆ ಯಹೂದಿಯರು ಒಪ್ಪಂದ ಮಾಡುವುದನ್ನು ನಿರಾಕರಿಸಿದರು. ಹೀಗೆ ಯುದ್ಧದ ಆರಂಭವಾಯಿತು. ಮತ್ತು ಬನುನಝೀರ್ ತಮ್ಮ ಕೋಟೆಯಲ್ಲಿ ಬಹಳ ಬಂಡಾಯದ ರೀತಿಯಲ್ಲಿ ಕುಳಿತುಕೊಂಡರು." ಮರುದಿನ, ಹಝ್ರತ್ ಪೈಗಂಬರ್(ಸ)ರು ಈ ಮಾಹಿತಿಯನ್ನು ಪಡೆದರು ಅಥವಾ ಅವರು(ಸ) ಸ್ವತಃ ಪರಿಸ್ಥಿತಿಗಳಿಂದ ತಿಳಿದುಕೊಂಡರು ಯಹೂದಿಯರು ಮತ್ತೊಂದು ಗೋತ್ರ ಬನೂ ಖುರೈಝಾವು ಕೂಡ ಕೆಟ್ಟಿದ್ದಾರೆ. ಆದ್ದರಿಂದ ಅವರು ಸಹಾಬೀಯರ ಒಂದು ಗುಂಪಿನೊಂದಿಗೆ ಬನೂ ಖುರೈಝಾರ ಕೋಟೆಗಳ ಕಡೆಗೆ ಹೋಗಿ ಮುತ್ತಿಗೆ ಹಾಕಿದರು. ಬನೂ ಖುರೈಝಾ ಅವರು ತಮ್ಮ ರಹಸ್ಯವು ಬಹಿರಂಗವಾಗಿದನ್ನು ಕಂಡಾಗ, ಅವರು ಭಯಪಟ್ಟರು ಮತ್ತು ಕ್ಷಮೆಯನ್ನು ಕೋರಿದರು ಮತ್ತು ಶಾಂತಿ ಮತ್ತು ಪರಸ್ಪರ ಸಹಾಯಕ್ಕಾಗಿ ಹಝ್ರತ್ ಪೈಗಂಬರ್(ಸ) ಅವರೊಂದಿಗೆ ಒಪ್ಪಂದ ಮಾಡಿಕೊಂಡರು. ಅದ್ದರಿಂದ ಹಝ್ರತ್ ಪೈಗಂಬರ್(ಸ)ರು ತಮ್ಮ ಮುತ್ತಿಗೆಯನ್ನು ತೆಗೆದುಹಾಕಿದರು ಮತ್ತು ನಂತರ ಬನೂ ನಝೀರಿನ ಕೋಟೆಗಳ ಕಡೆಗೆ ಬಂದರು, ಆದರೆ ಬನೂನಝೀರ್ ಅವರ ಮೊಂಡುತನ ಮತ್ತು ದ್ವೇಷವನ್ನು ಹರಡುವುದನ್ನು ಮುಂದುವರೆಸಿದರು ಮತ್ತು ನಿಯಮಿತ ಯುದ್ಧವು ನಡೆಯಿತು.

ಬನೂನಝೀರ್ ಯುದ್ಧದ ಕಾರಣದ ಬಗ್ಗೆ ವಿವರಿಸಲಾದ ಎರಡು ವಿಭಿನ್ನ ವರದಿಗಳಿವು, ಮತ್ತು ಕೊನೆಯದಾಗಿ ಉಲ್ಲೇಖಿಸಲಾದ ವರದಿಯು ಐತಿಹಾಸಿಕ ದೃಷ್ಟಿಕೋನದಿಂದ ಹೆಚ್ಚು ನಿಖರ ಮತ್ತು ಸರಿಯಾಗಿದೆ. ಮತ್ತು ಇತರ ಹೆಚ್ಚಿನ ಹದೀಸ್‌ಗಳು ಸಹ ಈ ವರದಿಯನ್ನು ಬೆಂಬಲಿಸುತ್ತವೆ, ಆದರೆ ಮೊದಲ ವರದಿಯನ್ನು ಇತಿಹಾಸಕಾರರು ಹೆಚ್ಚಾಗಿ ವರದಿ ಮಾಡುತ್ತಾರೆ ಮತ್ತು ಕೆಲವು ಅಧಿಕೃತ ಹದೀಸ್‌ಗಳಲ್ಲಿ ಅದರ ದೃಢಿಕರಣದ ಬಗ್ಗೆ ಸೂಚಿಸಲಾಗುತ್ತದೆ. ಆದ್ದರಿಂದ, ಇಮಾಮ್ ಬುಖಾರಿ, ಝುಹ್ರಿಯ ಅಭಿಪ್ರಾಯಕ್ಕೆ ಆದ್ಯತೆ ನೀಡಿದರೂ, ಆಮಿರ್ ಗೋತ್ರದ ಇಬ್ಬರು ಕೊಲ್ಲಲ್ಪಟ್ಟ ಜನರ ಪರಿಹಾರಧನದ ಬಗ್ಗೆಯೂ ಪ್ರಸ್ತಾಪಿಸಿದ್ದಾರೆ. ಆದ್ದರಿಂದ, ನಮ್ಮ ಅಭಿಪ್ರಾಯದಲ್ಲಿ, ಎರಡೂ ವರದಿಗಳನ್ನು ಸರಿಯಾಗಿ ಅರ್ಥಮಾಡಿಕೊಂಡರೆ, ನಂತರ ಯಾವುದೇ ಸಮಸ್ಯೆ ಇರುವುದಿಲ್ಲ. ಆದಾಗ್ಯೂ, ಇದು ಯುದ್ಧಗಳ ಕಾಲಕ್ಕೆ ಸಂಬಂಧಿಸಿದ ಈ ವರದಿಗಳಲ್ಲಿ ಒಂದಕ್ಕೆ ಆದ್ಯತೆಯನ್ನು ನೀಡಬೇಕಾಗುತ್ತದೆ. ಏಕೆಂದರೆ ಎರಡೂ ವರದಿಗಳನ್ನು ಸಮಯಕ್ಕೆ ಅನುಗುಣವಾಗಿ ಸರಿಯಾಗಿ ಗುರುತಿಸಲಾಗುವುದಿಲ್ಲ. ಬನೂನಝೀರ್ ಅವರು ವಿವಿಧ ಸಂದರ್ಭಗಳಲ್ಲಿ ಯುದ್ಧದ ವಿವಿಧ ಕಾರಣಗಳನ್ನು ಸೃಷ್ಟಿಸಿದ್ದಾರೆ ಮತ್ತು ಹಝ್ರತ್ ಪೈಗಂಬರ್(ಸ)ರು ಅವರನ್ನು ಗಮನಿಸುತ್ತಿರಲಿಲ್ಲ ಮತ್ತು ಕರುಣೆಯಿಂದ ವರ್ತಿಸಿದರು. ಆದರೆ ಕೊನೆಯ ಕಾರಣ ಬಿಅ್‌ರ್ ಮಊನಾದ ಘಟನೆಯ ನಂತರ ಸಂಭವಿಸಿತು, ಹಝ್ರತ್ ಪೈಗಂಬರ್(ಸ) ಅವರು ಅವರ ಎಲ್ಲಾ ಯೋಜನೆಗಳನ್ನು ತಿಳಿಸಿ ಅವರ ವಿರುದ್ಧ ಕ್ರಮಗಳನ್ನು ತೆಗೆದುಕೊಳ್ಳುವಂತೆ ಆದೇಶಿಸಿದರು. ಉಲ್ಲೇಖಿಸಲಾದ ವಿವಿಧ ಕಾರಣಗಳು ತಮ್ಮದೇ ಆದ ಸ್ಥಳದಲ್ಲಿ ಸರಿಯಾಗಿವೆ ಎಂದು ತೋರುತ್ತದೆ, ಆದರೆ ಕೊನೆಯ ಯೋಜನೆಯ ಕಾರಣವೆಂದರೆ ಬನೂ ಆಮಿರ್‌ನ ಇಬ್ಬರು ಜನರನ್ನು ವಧಿಸಿದ್ದರಿಂದ ಅವರ ದೀತ್ (ಪರಿಹಾರ ಧನ) ಸಂದರ್ಭದಲ್ಲಿ ಸಂಭವಿಸಿತು. **ವಲ್ಲಾಹು ಅಅ್‌ಲಮು** (ಸರ್ವಶಕ್ತನಾದ ಅಲ್ಲಾಹನು ಬಲ್ಲವನಾಗಿದ್ದಾನೆ). ನಾನು ಉಲ್ಲೇಖಿಸಿರುವ ಈ ಎಲ್ಲಾ ಹೇಳಿಕೆಗಳನ್ನು ಸೀರತ್ ಖಾತಮನ್ನಬೀಯೀನ್‌ನಿಂ ತೆಗೆದುಕೊಳ್ಳಲಾಗಿದೆ. (ಸಾಹಿಬ್ಝಾದಾ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಎಂಎ, ಪುಟ 522 ರಿಂದ 525)

ಹಝ್ರತ್ ಪೈಗಂಬರ್(ಸ) ಅವರನ್ನು ಕೊಲ್ಲಲು ಬನೂನಝೀರ್ ಕೂಡ ದುಷ್ಟ ಸಂಚನ್ನು ಹೊಂದಿದ್ದರೆಂದು ಬರೆಯಲಾಗಿದೆ. ಇದೂ ಒಂದು

ಕಾರಣವಾಗಿತ್ತು. ಈ ನಿಟ್ಟಿನಲ್ಲಿ, ಉಲ್ಲೇಖಿಸಿರುವಂತೆ, ಹಝ್ರತ್ ಪೈಗಂಬರ್(ಸ)ರು ಸಹಾಬೀಯರ ಒಂದು ಗುಂಪಿನೊಂದಿಗೆ ಬನೂನಝೀರಿನ ಬಳಿಗೆ ಭೇಟಿ ನೀಡಿದರು. ಹಝ್ರತ್ ಪೈಗಂಬರ್(ಸ) ಬನೂ ನಝೀರಿನ ಬಳಿಗೆ ತಲುಪಿದ್ದು ಶನಿವಾರದಂದಾಗಿತ್ತು. ಹಝ್ರತ್ ಪೈಗಂಬರ್(ಸ) ಮುಹಾಜಿರೀನ್ ಹಾಗೂ ಅನ್ಸಾರ್‌ಗಳೊಂದಿಗೆ ಖುಬಾ ಮಸೀದಿಯಲ್ಲಿ ನಮಾಝ್ ನಿರ್ವಹಿಸಿದರು. ನಂತರ ಒಪ್ಪಂದದಂತೆ ಬನೂನಝೀರ್ ಬಳಿ ತೆರಳಿ ಪರಿಹಾರ ಧನವನ್ನು ನೀಡುವಂತೆ ಒತ್ತಾಯಿಸಿದರು. (ಸೀತ್ ಎನ್ಸೈಕ್ಲೋಪೀಡಿಯಾ, ಸಂಪುಟ–7, ಪುಟ–38, ದಾರುಸ್ಸಲಾಮ್, ರಿಯಾದ್, 1434 ಹಿಜರಿ)

ಹಝ್ರತ್ ಪೈಗಂಬರ್(ಸ)ರ ಜೊತೆಗೆ ಹತ್ತಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಸಹಾಬಿಯರ ಒಂದು ಸಂಘವಿತ್ತು. ಒಂದು ವರದಿಯಲ್ಲಿ ಹೀಗೆ ವರದಿಯಾಗಿದೆ: ಅವರಲ್ಲಿ ಹಝ್ರತ್ ಅಬೂಬಕರ್(ರ), ಹಝ್ರತ್ ಉಮರ್(ರ) ಮತ್ತು ಹಝ್ರತ್ ಅಲಿ(ರ) ಸಹ ಇದ್ದರು. ಹಝ್ರತ್ ಝುಬೈರ್(ರ), ಹಝ್ರತ್ ತಲ್ಹಾ(ರ), ಹಝ್ರತ್ ಸಾಅದ್ ಬಿನ್ ಮುಆಝ್(ರ), ಹಝ್ರತ್ ಉಸೈದ್ ಬಿನ್ ಹುಝೈರ್(ರ) ಮತ್ತು ಹಝ್ರತ್ ಸಾಅದ್ ಬಿನ್ ಉಬಾದಾ(ರ) ಅವರ ಹೆಸರುಗಳನ್ನು ಸಹ ಕಂಡುಬರುತ್ತವೆ. (ಕಿತಾಬುಲ್–ಮಘಾಜಿ, ಸಂಪುಟ–1, ಪುಟ–309, ದಾರುಲ್ ಕುತುಬ್ ಇಲ್‌ಮಿಯಾ, ಬೈರುತ್, ಲೆಬನಾನ್, 2003)

ಹಝ್ರತ್ ಪೈಗಂಬರ್(ಸ) ಯಹೂದಿಯರೊಡನೆ ಹಣದ ಬಗ್ಗೆ ಮಾತಾಡಿದಾಗ ಅವರು ಹೀಗೆ ಹೇಳಿದರು: ಹೌದೌದು ಅಬುಲ್‌ಖಾಸಿಮ್, ನೀವು ಮೊದಲು ಊಟ ಮಾಡಿರಿ. ಅನಂತರ ಈ ಬಗ್ಗೆ ಮಾತಾಡೋಣ. ಯಹೂದಿಯರು ತೋರಿಕೆಗೆ ಬಹಳ ಹಸನ್ಮುಖರಾಗಿ ವರ್ತಿಸಿದರು. ಆದರೆ ರಹಸ್ಯವಾಗಿ ತಂತ್ರ ಹೂಡಿ ಹಝ್ರತ್ ಪೈಗಂಬರ್(ಸ)ರನ್ನು ವಧಿಸಲು ಪರಸ್ಪರ ಸಮಾಲೋಚನೆ ನಡೆಸಿದರು. ಹಝ್ರತ್ ಪೈಗಂಬರ್(ಸ) ಆ ಯಹೂದಿಯರ ಮನೆಗಳಲ್ಲಿ ಒಂದರ ನೆರಳಲ್ಲಿ ಕುಳಿತುಕೊಂಡಿದ್ದರು. ಮೇಲಿನಿಂದ ಒಂದು ಭಾರವಾದ ಕಲ್ಲನ್ನು ಹಝ್ರತ್ ಪೈಗಂಬರ್(ಸ)ರ ಮೇಲೆ ಬೀಳಿಸಲು ಅವರು ಯೋಜನೆ ಹಾಕಿದರು. (ಸೀರತ್ ಅಲ್–ಹಲ್ಬಿಯಾಹ್, ಸಂಪುಟ–2, ಪುಟ–357, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್, ಲೆಬನಾನ್)

ಇನ್ನೊಬ್ಬ ಬರಹಗಾರರು ಈ ಘಟನೆಯನ್ನು ವಿವರಿಸುತ್ತಾ ಹೀಗೆ ಬರೆಯುತ್ತಾರೆ ಅವರ ಮುಖ್ಯಸ್ಥ ಹುಯ್ ಬಿನ್ ಅಖ್ತಬ್ ಹೇಳಿದನು, ಓ ಯಹೂದಿಗಳ ಸಮುದಾಯವೇ! ಮುಹಮ್ಮದ್(ಸ) ಅವರು ತಮ್ಮ ಕೆಲವು ಸಹಚರರೊಂದಿಗೆ ನಿಮ್ಮ ಬಳಿಗೆ ಬಂದಿದ್ದಾರೆ. ಅವರ ಸಂಖ್ಯೆ ಹತ್ತಕ್ಕಿಂತ ಕಡಿಮೆಯಿದೆ. ಈ ಮನೆಯ ಮೇಲಿಂದ ದೊಡ್ಡ ಕಲ್ಲನ್ನು ಎಸೆದು ಮುಹಮ್ಮದ್(ಸ.ಅ)ರನ್ನು ಕೊಂದುಹಾಕಿ. ನಿಮಗೆ ಮತ್ತೆ ಇಂತಹ ಉತ್ತಮ ಅವಕಾಶ ಸಿಗುವುದಿಲ್ಲ. ಅವರನ್ನು ಕೊಂದರೆ ಅವರ ಜೊತೆಗಿದ್ದವರು ಚದುರಿ ಹೋಗುತ್ತಾರೆ. ಮಕ್ಕಾದಿಂದ ಬಂದ ಅವರ ಸಹಚರರು ಮಕ್ಕಾಗೆ ಹಿಂದಿರುಗುತ್ತಾರೆ ಮತ್ತು ನಿಮ್ಮ ಮಿತ್ರರಾದ ಔಸ್ ಮತ್ತು ಖಝ್ರಜ್ ಮಾತ್ರ ಇಲ್ಲಿ ಉಳಿಯುತ್ತಾರೆ, ಆದ್ದರಿಂದ ನೀವು ಈಗ ಏನು ಮಾಡಬೇಕೆಂದು ಬಯಸುತ್ತೀರೋ ಅದನ್ನು ಮಾಡಿ. ಇದರ ಬಗ್ಗೆ ಅಲ್ಲಿದ್ದ ಓರ್ವ ದರಿದ್ರ ಯಹೂದಿ ಅಮ್ರೂ ಬಿನ್ ಜಹ್ಹಾಶ್ ಹೇಳಿದನು: ನಾನು ಈ ಮನೆಯ ಮೇಲೆ ಹತ್ತಿ ಕಲ್ಲು ಎಸೆದು ಮುಹಮ್ಮದ್(ಸ) ಅವರನ್ನು ಕೊಲ್ಲುತ್ತೇನೆ. ಇಷ್ಟೆಲ್ಲಾ ಸಮಾಲೋಚನೆ ನಡೆಯುತ್ತಿದ್ದಾಗ, ಬನೂನಝೀರ್‌ನ ನಾಯಕರಲ್ಲಿ ಒಬ್ಬನಾದ ಸಲ್ಲಾಮ್ ಬಿನ್ ಮಿಶ್ಕಾಮ್ ಹೇಳಿದನು: ಓ ಯಹೂದಿಗಳ ಸಮುದಾಯವೇ! ನಿಮ್ಮ ಜೀವನದುದ್ದಕ್ಕೂ ನೀವು ಖಂಡಿತವಾಗಿಯೂ ನನ್ನನ್ನು ವಿರೋಧಿಸಿರಿ, ಆದರೆ ಇಂದು ನನ್ನ ಮಾತನ್ನು ಕೇಳಿ. ಅಲ್ಲಾಹನ ಆಣೆ! ನಿಮ್ಮ ಈ ಉದ್ದೇಶವನ್ನು ಮುಹಮ್ಮದ್ (ಸ) ಅವರಿಗೆ ತಿಳಿಸಲಾಗುವುದು ಮತ್ತು ಅದು ನಮ್ಮ ಮತ್ತು ಅವರ ನಡುವಿನ ಒಪ್ಪಂದದ ಉಲ್ಲಂಘನೆಯಾಗುತ್ತದೆ. ಆದರೆ ಯಹೂದಿಯರು ಅವನ ಮಾತನ್ನು ಕೇಳಲಿಲ್ಲ ಮತ್ತು ತಮ್ಮ ನಿರ್ಣಯದಲ್ಲಿ ಸ್ಥಿರವಾಗಿ ಉಳಿದರು. (ಸೀರತ್ ಎನ್ಸೈಕ್ಲೋಪೀಡಿಯಾ, ಸಂಪುಟ–7, ಪುಟಗಳು 39–40, ದಾರುಸ್ಸಲಾಮ್ ರಿಯಾದ್, 1434 ಹಿಜರಿ)

ತದನಂತರ ಅವರ ಮುಂದಿನ ಕ್ರಿಯೆ ಏನಾಗಿತ್ತು, ಅವರು ಏನು ಮಾಡಿದರು, ಅವರು ಹೇಗೆ ಹಝ್ರತ್ ಪೈಗಂಬರ್(ಸ)ರನ್ನು ಕೊಲ್ಲಲು ಯೋಜಿಸಿದರು ಮತ್ತು ಅಲ್ಲಾಹನು ಹೇಗೆ ಹಝ್ರತ್ ಪೈಗಂಬರ್(ಸ) ಅವರನ್ನು ರಕ್ಷಿಸಿದನು ಮತ್ತು ಅವರ ಯೋಜನೆಗಳನ್ನು ವಿಫಲಗೊಳಿಸಿದನು. ನಾನು ಅದನ್ನು ನಂತರ ವಿವರಿಸುತ್ತೇನೆ, ಇನ್‌ಶಾಅಲ್ಲಾಹ್.

ಅಂತಿಮವಾಗಿ, ನಾನು ನಿರ್ದಿಷ್ಟವಾಗಿ ಪಾಕಿಸ್ತಾನದ ಅಹ್ಮದೀಯರಿಗಾಗಿ ಪ್ರಾರ್ಥಿಸಲು ಬಯಸುತ್ತೇನೆ. ಪಾಕಿಸ್ತಾನದ ಅಹ್ಮದಿಯರನ್ನು ಇತ್ತೀಚಿಗೆ ಪುನಃ ಕಠಿಣವಾದ ಕಷ್ಟತೆಗಳಿಗೆ ಗುರಿಪಡಿಸಲಾಗುತ್ತಿದೆ. ಅಲ್ಲಾಹನು ಬೇಗನೇ ಪೀಡಕರಿಂದ ಮೋಕ್ಷ ನೀಡಲಿ. ಅಲ್ಲೂ ನಮ್ಮ ಸ್ಥಿತಿಗತಿಗಳು ಉತ್ತಮಗೊಳ್ಳಲಿ. ಸಣ್ಣ ಪುಟ್ಟ ವಿಷಯಗಳಿಗೆ ಮೊಕದ್ದಮೆ ಹೂಡಲು ಮತ್ತು ತೊಂದರೆ ಕೊಡಲು ಪ್ರಯತ್ನಿಸಲಾಗುತ್ತಿದೆ.

ಜುಮಾ ನಮಾಝಿನ ನಂತರ ನಾನು ಕೆಲವು ಜನಾಝ ಗ್ರಾಯಿಬ್ ನಮಾಝ್ ನಿರ್ವಹಿಸುಸುವೆನು. ಮೊದಲು ಅವರ ಬಗ್ಗೆ ಪ್ರಸ್ತಾಪಿಸುತ್ತೇನೆ.

ಮೊದಲ ಉಲ್ಲೇಖವು ಸನ್ಮಾನ್ಯ ಬಶೀರ್ ಅಹ್ಮದ್ ಸಾಹಿಬ್‌ರ ಪುತ್ರ ಸನ್ಮಾನ್ಯ ಗುಲಾಮ್ ಸರ್‌ವರ್ ಸಾಹಿಬ್ ಶಹೀದ್ ಮತ್ತು ಎರಡನೇ ಉಲ್ಲೇಖವು ಸನ್ಮಾನ್ಯ ಮುಶ್ತಾಖ್ ಅಹ್ಮದ್ ಬಾಜ್ವಾ ಸಾಹಿಬ್ ಅವರ ಪುತ್ರ ರಾಹತ್ ಅಹ್ಮದ್ ಬಾಜ್ವಾ ಸಾಹಿಬ್ ಸಅದುಲ್ಲಾಹ್‌ಪುರ ಮಂಡಿ ಬಹಾವುದ್ದೀನ್ ಅವರದ್ದಾಗಿದೆ. ಅವರನ್ನು ಜೂನ್ 8 ರಂದು ಶಹೀದ್ ಮಾಡಲಾಗಿದೆ. **ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ಅವರನ್ನು ಅಹ್ಮದಿಯ್ಯತ್ತಿನ ವಿರೋಧಿಯಾದ ಒಬ್ಬನು ನಿರಂತರವಾಗಿ ಗುಂಡು ಹಾರಿಸುವ ಮೂಲಕ ಗುಲಾಮ್ ಸರ್ವರ್ ಸಾಹಿಬ್ ಮತ್ತು ರಾಹತ್ ಬಾಜ್ವಾ ಸಾಹಿಬ್ ಅವರನ್ನು ಶಹೀದ್ ಮಾಡಿದನು. ಶಹಾದತ್ ಸಮಯದಲ್ಲಿ ಗುಲಾಮ್ ಸರ್ವರ್ ಸಾಹಿಬ್ ಅವರ ವಯಸ್ಸು 64 ವರ್ಷ ಆಗಿತ್ತು ಮತ್ತು ರಾಹತ್ ಬಾಜ್ವಾ ಸಾಹಿಬ್ ಅವರ ವಯಸ್ಸು 32 ವರ್ಷ ಆಗಿತ್ತು. ವಿವರಗಳ ಪ್ರಕಾರ, ಗುಲಾಮ್ ಸರ್ವರ್ ಸಾಹಿಬ್ ಶಹೀದ್ ಅಹ್ಮದಿಯಾ ಮಸೀದಿ ಸಾದುಲ್ಲಾಪುರದಿಂದ ಝುಹರ್ ನಮಾಝ್ ನಿರ್ವಹಿಸಿದ ನಂತರ ತಮ್ಮ ಮನೆಗೆ ತೆರಳುತ್ತಿದ್ದಾಗ, ಮನೆಯ ಸಮೀಪ, ಸ್ಥಳೀಯ ಮದರಸಾದ ವಿದ್ಯಾರ್ಥಿಯಾಗಿದ್ದ ಅಹ್ಮದಿಯ್ಯತ್ತಿನ ವಿರೋಧಿ ಸೈಯದ್ ಅಲಿ ರಝಾ ಎಂಬವನು ಗುಲಾಮ್ ಸರ್ವರ್ ಸಾಹಿಬ್ ಅವರನ್ನು ಹಿಂಬಾಲಿಸಿ ಪಿಸ್ತೂಲಿನಿಂದ ಗುಂಡು ಹಾರಿಸಿದ್ದಾನೆ. ತಲೆಗೆ ಗುಂಡು ತಗುಲಿ ಸ್ಥಳದಲ್ಲೇ ಶಹೀದ್ ಆಗಿದ್ದರು. ಘಟನೆಯ ನಂತರ, ಹಂತಕನು ಸ್ಥಳವನ್ನು ತೊರೆದು ಗ್ರಾಮದ ಇನ್ನೊಂದು ಬದಿಗೆ ಹೋಗಿ ಮತ್ತೊಬ್ಬ ಅಹ್ಮದಿ ಸನ್ಮಾನ್ಯ ರಾಹತ್ ಅಹ್ಮದ್ ಬಾಜ್ವಾ ಸಾಹಿಬ್ ಅವರನ್ನು ಗುಂಡಿಕ್ಕಿ ಕೊಂದನು, ನಂತರ ಹಂತಕನನ್ನು ಬಂಧಿಸಲಾಯಿತು. ಘಟನೆಯ ನಂತರ, ಹಂತಕ ತನ್ನ ತಪ್ಪೊಪ್ಪಿಗೆ ಹೇಳಿಕೆಯಲ್ಲಿ ಹೌದು, ನಾನು ಅವನನ್ನು ಕೊಂದಿದ್ದೇನೆ ಎಂದು ಪೊಲೀಸರಿಗೆ ತಿಳಿಸಿದ್ದಾನೆ. ಅವನು ಸ್ವರ್ಗವನ್ನು ಪಡೆಯಲು ಈ ಕ್ರಿಯೆಯನ್ನು ಮಾಡಿದ್ದಾನೆ ಎಂದು ತಿಳಿಸಿದ್ದಾನೆ. ನಾನು ಸ್ವರ್ಗವನ್ನು ಪಡೆಯಲು ಎಲ್ಲವನ್ನೂ ಮಾಡಿದ್ದೇನೆ ಎಂದು ಹೇಳಿದನು. ನಾನು ಮತ್ತೊಬ್ಬ ಅಹ್ಮದಿಯನ್ನು ಕಂಡಿದ್ದರೆ ಅವನನ್ನು ಸಹ ಕೊಲ್ಲಲು ಹಿಂಜರಿಯುತ್ತಿರಲಿಲ್ಲ.

ಹೀಗೆ ಮೌಲವಿಗಳು ಬೋಧಿಸುವ ಇಸ್ಲಾಮಿನ ಶಿಕ್ಷಣವು ಜನರ ಮೇಲೆ ಈ ಪರಿಣಾಮವನ್ನು ಬೀರುತ್ತದೆ. ಇವರು ಇಸ್ಲಾಂ ಧರ್ಮವನ್ನು ಬೋಧಿಸುವವರಾಗಿದ್ದಾರೆ ಮತ್ತು ಇಸ್ಲಾಂ ಧರ್ಮವನ್ನು ಅವಮಾನಿಸುವವರಾಗಿದ್ದಾರೆ. ಅಲ್ಲಾಹನು ಅವರನ್ನು ಅತೀ ಬೇಗ ಹಿಡಿಯಲಿ.

ಗುಲಾಮ್ ಸರ್ವರ್ ಸಾಹಿಬ್ ಶಹೀದ್ ಇಬ್ನ್ ಬಶೀರ್ ಅಹ್ಮದ್ ಸಾಹಿಬ್ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಮುತ್ತಜ್ಜ ಹಝ್ರತ್ ಶರ್ಫ್‌ದೀನ್ ಸಾಹಿಬ್(ರ) ಅವರ ಮೂಲಕ ಪ್ರವೇಶಿಸಿದೆ, ಅವರು ಪ್ಲೇಗ್‌ನ ಕುರುಹಿನ ಪ್ರಭಾವದಿಂದ ಸಾದುಲ್ಲಾಪುರದ ಇನ್ನಿತರ ಜನರೊಂದಿಗೆ ಹಝ್ರತ್ ಮೌಲಾನಾ ಗುಲಾಮ್ ರಸೂಲ್ ರಾಜಿಕಿ(ರ) ಅವರ ಮೂಲಕ ಪತ್ರದ ಮೂಲಕ ಬೈಅತ್ ಮಾಡಿದರು. ತದನಂತರ, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರು 1903 ರಲ್ಲಿ ಜ್ಹೇಲಮ್ ಮುಖದ್ದಮೆಯ ಸಂದರ್ಭದಲ್ಲಿ ಜ್ಹೇಲಮ್‌ಗೆ ಭೇಟಿ ನೀಡಿದಾಗ, ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಭೇಟಿಯಾದರು. ಅಲ್ಲಾಹನ ಅನುಗ್ರಹದಿಂದ ಅವರು ವಸಿಯ್ಯತ್ ವ್ಯವಸ್ಥೆಯಲ್ಲಿ ಸೇರಿದ್ದರು. ದಿವಂಗತರು ವಸಿಯ್ಯತ್ ವ್ಯವಸ್ಥೆಯಲ್ಲಿ ಭಾಗಿಯಾಗಿದ್ದ, ಐದು ಹೊತ್ತಿನ ನಮಾಝ್ ನಿರ್ವಹಿಸುತ್ತಿದ್ದ, ಐಚ್ಛಿಕ ಉಪವಾಸಗಳನ್ನು ಅನುಷ್ಠಿಸುತ್ತಿದ್ದ, ಪವಿತ್ರ ಖುರ್‌ಆನ್ ಪಾರಾಯಣ ಮಾಡುವ ಅಭ್ಯಾಸ ಹೊಂದಿದ್ದ, ದುರೂದ್ ಶರೀಫ್ ಅಧಿಕವಾಗಿ ಹೇಳುತ್ತಿದ್ದ, ಜಮಾಅತಿನ ಪುಸ್ತಕಗಳನ್ನು ಓದುತ್ತಿದ್ದ, ದಿನನಿತ್ಯ ದಾನಧರ್ಮಗಳನ್ನು ಮಾಡುತ್ತಿದ್ದ, ರಹಸ್ಯವಾಗಿ ನಿರ್ಗತಿಕರಿಗೆ ಸಹಾಯ ಮಾಡುತ್ತಿದ್ದ ವ್ಯಕ್ತಿಯಾಗಿದ್ದರು. ಸ್ಥಳೀಯ ಜಮಾಅತ್ತಿನಲ್ಲಿ ಪ್ರಧಾನ ಕಾರ್ಯದರ್ಶಿಯ ಜೊತೆಗೆ ಸಾದುಲ್ಲಾಪುರದಲ್ಲಿ ಮುರಬ್ಬಿ ಅತ್‌ಫಾಲ್ ಆಗಿ ಸೇವೆ ಸಲ್ಲಿಸುವ ಅವಕಾಶವೂ ಲಭಿಸಿತು. ದಿವಂಗತರು ತಬ್ಲೀಗ್ ಮಾಡಲು ಬಹಳ ಆಸಕ್ತಿ ಹೊಂದಿದ್ದರು, ಅನೇಕ ಸೌಭಾಗ್ಯವಂತರು ಅವರ ಮೂಲಕ ಅಹ್ಮದಿಯ್ಯತ್ತಿನಲ್ಲಿ ಪ್ರವೇಶಿಸಿದರು. ಕಲಿಮ ಉಚ್ಚರಿಸಿದ ಕಾರಣದಿಂದ ಇತರ ಕೆಲವು ಸಹೋದರರ ಜೊತೆಗೆ ಮೂರ್‍ನಾಲ್ಕು ದಿನಗಳಿಗೆ ಅಲ್ಲಾಹನ

ಮಾರ್ಗದಲ್ಲಿ ಜೈಲು ವಾಸ ಅನುಭವಿಸಲು ಸೌಭಾಗ್ಯ ಪಡೆದಿದ್ದರು.

ಜಿಲ್ಲಾ ಖಾಯಿದ್ ಆದ ಶಾಹಿದ್ ಇಮ್ರಾನ್ ಸಾಹಿಬ್ ಅವರು ದಿವಂಗತರ ಸೋದರಳಿಯರೂ ಆಗಿದ್ದು ಅವರು ಹೇಳುತ್ತಾರೆ: ನನ್ನ ಹೆಸರನ್ನು ಅಹ್ಮದಿಯಾ ಜಮಾಅತ್ತಿನ ಇತಿಹಾಸಲದಲಿ ಸುವರ್ಣಾಕ್ಷರಗಳಲ್ಲಿ ಬರೆಯುವ ಅವಕಾಶ ಅಲ್ಲಾಹನು ನನಗೆ ನೀಡಲಿ ಎಂದು ಮೃತ ಶಹೀದ್ ಪದೇ ಪದೇ ತಮ್ಮ ಆಸೆಯನ್ನು ವ್ಯಕ್ತಪಡಿಸಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅವರ ಆಸೆಯನ್ನು ಈ ರೀತಿಯಲ್ಲಿ ಪೂರೈಸಿದನು. ಅವರು ತಮ್ಮ ಧರ್ಮಪತ್ನಿ ಮುಕರ್ರಮಾ ಸಾಜಿದಾ ಪರ್ವೀನ್ ಸಾಹಿಬಾ ಅವರನ್ನು ಹೊರತು ಪಡಿಸಿ ಇಬ್ಬರು ಪುತ್ರರು ಮತ್ತು ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಅವರಿಗೆ ಇಬ್ಬರು ಕಿರಿಯ ಹೆಣ್ಣು ಮಕ್ಕಳಿದ್ದಾರೆ, ಒಬ್ಬರು ಎಫ್‌ಎಸ್‌ಸಿ ಮತ್ತು ಒಬ್ಬರು ಮೆಟ್ರಿಕ್ಯುಲೇಷನ್‌ನಲ್ಲಿ ಓದುತ್ತಿದ್ದಾರೆ. ಉಳಿದ ಮಕ್ಕಳಿಗೆ ಮದುವೆಯಾಗಿದೆ. ಅವರಲ್ಲಿ ವಿಧೇಯತೆಯ ಮನೋಭಾವ ಪರಿಪೂರ್ಣವಾಗಿತ್ತು ಎಂದು ಹೇಳಲಾಗುತ್ತದೆ. ಜಮಾಅತ್ ಅಧ್ಯಕ್ಷರು ಹೇಳುತ್ತಾರೆ: ದಿವಂಗತ ಹುತಾತ್ಮರೊಂದಿಗೆ ನಿಕಟ ಸಂಬಂಧವನ್ನು ಹೊಂದಿದ್ದರು ಮತ್ತು ಕೆಲವೊಮ್ಮೆ ಅವರೊಂದಿಗೆ ಕೋಪಗೊಳ್ಳುತ್ತಾರೆ. ಪರಸ್ಪರ ಸಂಬಂಧದಲ್ಲಿ ಏರಿಳಿತಗಳಿವೆ ಆದರೆ ಜಮಾಅತ್ತಿನ ವಿಷಯ ಬಂದಾಗ ನೀವು ಜಮಾಅತ್ತಿನ ಸದರ್ ಆಗಿದ್ದೀರಿ ಎಂದು ಹೇಳುತ್ತಿದ್ದರು. ನೀವು ಏನು ಹೇಳಿದರೂ ನಾನು ಕಟ್ಟುನಿಟ್ಟಾಗಿ ಅನುಸರಿಸುತ್ತೇನೆ. ಇದು ಅವರು ತೋರಿಸಿದ ಮಾದರಿಯಾಗಿತ್ತು. ತಮ್ಮ ವೈಯುಕ್ತಿಕ ಅಸಮಾಧಾನಗಳಿಂದಾಗಿ ಜಮಾಅತ್ತಿನ ವ್ಯವಸ್ಥೆಗೆ ಸಹಕರಿಸುತ್ತಿಲ್ಲ ಎಂದು ಜನರಿಂದ ಸಾಕಷ್ಟು ದೂರುಗಳಿರುತ್ತವೆ. ಆದರೆ ಇವರ ಎಂದಿಗೂ ಹೀಗೆ ದೂರಲಲ್ಲ. ಆಡಳಿತವನ್ನು ಪರಿಪೂರ್ಣ ವಿಧೇಯತೆಯಿಂದ ಪಾಲಿಸಿದ್ದಾರೆ.

ಜಿಲ್ಲೆಯ ಮುರಬ್ಬಿ ಸಿಲ್‌ಸಿಲಾ ಮಲಿಕ್ ಅಮಾನುಲ್ಲಾ ಸಾಹಿಬ್ ಹೇಳುತ್ತಾರೆ: ಗುಲಾಮ್ ಸರ್ವರ್ ಸಾಹಿಬ್ ಬಗ್ಗೆ ನನ್ನ ಅವಲೋಕನವೆಂದರೆ ಅವರು ಯಾವಾಗಲೂ ಮಸೀದಿಗೆ ಮೊದಲು ಬಂದು ಬಲಭಾಗದಲ್ಲಿ ಮೊದಲ ಸಾಲಿನಲ್ಲಿ ಕುಳಿತುಕೊಳ್ಳುತ್ತಿದ್ದರು. ದೇವರ ಸ್ಮರಣೆಯಲ್ಲಿ ತೊಡಗಿರುತ್ತಿದ್ದರು. ಅವರು ಅತ್ಯಂತ ಶಾಂತ ಮತ್ತು ವಿನಮ್ರ ಸ್ವಭಾವದ ವ್ಯಕ್ತಿಯಾಗಿದ್ದರು. ಖಿಲಾಫತ್ ಬಗ್ಗೆ ಅವರಿಗೆ ವಿಶೇಷ ಪ್ರೀತಿ ಇತ್ತು. ಹಝ್ರತ್ ಅಖ್‌ದಸ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಗ್ರಂಥಗಳನ್ನು ಓದಲು ಇಷ್ಟಪಡುತ್ತಿದ್ದರು ಮತ್ತು ತಬ್ಲೀಗ್‌ನಲ್ಲಿಯೂ ಒಲವು ಹೊಂದಿದ್ದರು. ಆದ್ದರಿಂದ, ಅವರು ಹಝ್ರತ್ ಖಲೀಫತುಲ್ ಮಸೀಹ್ ರಾಬಿ(ರಹ್)ರವರ ಮಜ್ಲಿಸ್-ಎ-ಇರ್ಫಾನ್ ಮತ್ತು ಇತರ ಆಡಿಯೊ-ವಿಡಿಯೋಗಳನ್ನು ತಮ್ಮ ಬಳಿ ಇಟ್ಟುಕೊಳ್ಳುತ್ತಿದ್ದರು ಮತ್ತು ಅವುಗಳನ್ನು ಬಹಳ ಆಸಕ್ತಿಯಿಂದ ಕೇಳುತ್ತಿದ್ದರು ಮತ್ತು ವೀಕ್ಷಿಸುತ್ತಿದ್ದರು. ಓರ್ವ ಮುರಬ್ಬಿ ಬರೆದರು: ನಾನು ಒಂದು ಕನಸ್ಸಿನಲ್ಲಿ ಮಸೀದಿಯ ಮೇಲೆ ದಾಳಿ ಮಾಡಲಾಗಿದೆ ಮತ್ತು ನಾನು ಹುತಾತ್ಮನಾಗಿರುವೆನು, ಅಂದರೆ ಮುರಬ್ಬಿಯರು. ಮುರಬ್ಬಿ ಸಾಹಬ್ ಈ ಕನಸ್ಸನ್ನು ವಿವರಿಸಿದಾಗ, ದಿವಂಗತ ಹುತಾತ್ಮರು ಹೇಳಿದರು: ಮುರಬ್ಬಿ ಸಾಹಿಬ್, ನೋಡೋಣ, ಮೊದಲು ನೀವು ಹುತಾತ್ಮರಾಗುತ್ತೀರಾ ಅಥವಾ ನಾನು. ಈ ಮಾತನ್ನು ಹೇಳಲು ಕಾರಣವಾದ ಸುಳಿವು ಅವರಿಗೆ ಮೊದಲೇ ಸಿಕ್ಕಿದೆ ಎಂದು ತೋರುತ್ತದೆ. ಸರ್ವಶಕ್ತನಾದ ಅಲ್ಲಾಹನು ಅವರ ಪದವಿಯನ್ನು ಉನ್ನತೀಕರಿಸಲಿ ಮತ್ತು ಅವರ ಪೀಳಿಗೆಯಲ್ಲಿ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ ಮತ್ತು ಅವರು ಸಂಪೂರ್ಣ ನಿಷ್ಠೆಯಿಂದ ಬದುಕಲು ಅವಕಾಶ ಮಾಡಿಕೊಡಲಿ.

ಎರಡನೆಯ ಉಲ್ಲೇಖ ರಾಹತ್ ಅಹ್ಮದ್ ಬಜ್ವಾ ಸಾಹಿಬ್ ಶಹೀದ್ ಅವರದ್ದಾಗಿದೆ. ಅವರು ಮುಷ್ತಾಕ್ ಅಹ್ಮದ್ ಬಾಜ್ವಾ ಸಾಹಿಬ್ ಅವರ ಪುತ್ರ ಆಗಿದ್ದರು. ವಿವರಗಳ ಪ್ರಕಾರ, ರಾಹತ್ ಬಾಜ್ವಾ ಸಾಹಿಬ್ ಸಾದುಲ್ಲಾಪುರ್ ಬಸ್ ನಿಲ್ದಾಣದಲ್ಲಿರುವ ತಮ್ಮ ಅಡುಗೆ ಕೇಂದ್ರದಿಂದ ಮನೆಗೆ ಹಿಂದಿರುಗುತ್ತಿದ್ದಾಗ ಮೇಲೆ ತಿಳಿಸಿದ ಹಂತಕ ಸೈಯದ್ ಅಲಿ ರಾಝಾ ಪಿಸ್ತೂಲ್‌ನಿಂದ ಅವರ ಮೇಲೆ ಗುಂಡು ಹಾರಿಸಿದ್ದಾನೆ. ತಲೆಗೆ ಗುಂಡು ತಗುಲಿ ಅವರು ಸ್ಥಳದಲ್ಲೇ ಹುತಾತ್ಮರಾಗಿದ್ದರು. ರಾಹತ್ ಅಹ್ಮದ್ ಬಾಜ್ವಾ ಸಾಹಿಬ್ ಅವರ ಕುಟುಂಬದಲ್ಲಿ ಅಹ್ಮದಿಯ್ಯತ್ ಅವರ ಅಜ್ಜ ಸನ್ಮಾನ್ಯ ರಶೀದ್ ಅಹ್ಮದ್ ಸಾಹಿಬ್ ಅವರ ಮೂಲಕ ಪ್ರವೇಶಿಸಿತು, ಅವರು 1978 ರಲ್ಲಿ ಅವರ ಸಹೋದರ ಮಾನ್ಯ ಹಫೀಜುಲ್ಲಾ ಸಾಹಿಬ್ ಮೂಲಕ ಬೈಅತ್ ಮಾಡಿದರು. ಅಲ್ಲಾಹನ ಅನುಗ್ರಹದಿಂದ ಅವರು ಮೂಸಿಯಾಗಿದ್ದರು. ಅವರಿಗೆ ಯಾವುದಾದರು ಅಹ್ಮದಿಯರ ಶಹಾದತ್‌ನ ಸುದ್ದಿ ತಿಳಿದು ಬರುತ್ತಿದ್ದರೆ ಅದೃಷ್ಟವಂತರಿಗೆ ಈ ಸ್ಥಾನಮಾನವನ್ನು ನೀಡಲಾಗುತ್ತದೆ ಎಂದು ಅವರು ಬಹಳ ಹೆಮ್ಮೆಯಿಂದ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಿದ್ದರು. ದಿವಂಗತರಿಗೆ ಖಿಲಾಫತಿನೊಂದಿಗೆ ಅಪಾರವಾದ ಪ್ರೀತಿಯಿತ್ತು. ಅವರು ಅತಿಥಿ ಸತ್ಕಾರಿ, ಹಸನ್ಮುಖಿ, ಪ್ರತಿಯೊಬ್ಬರೊಡನೆ ಪ್ರೀತಿಯಿಂದ ವರ್ತಿಸುತ್ತಿದ್ದರು. ಅವರು 2018 ರಲ್ಲಿ ಖಾದಿಯಾನ್‌ಗೆ ಹೋದಾಗ, ಅವರು ಮಸೀದಿ ಅಥವಾ ಬೈತುದ್ದುಆನಲ್ಲಿ ಎಲ್ಲಾ ಸಮಯದಲ್ಲೂ ನಮಾಝಿನಲ್ಲಿ ತೊಡಗಿದ್ದರು. ಜಮಾಅತ್ತಿನ ಸೇವೆಗೆ ಕರೆದಾಗಲೆಲ್ಲ ಎಲ್ಲಾ ಕೆಲಸ ಬಿಟ್ಟು ತಕ್ಷಣ ಹಾಜರಾಗುತ್ತಿದ್ದರು. ಸ್ವಂತ ತಿಂಡಿ ಅಂಗಡಿ ಇದ್ದ ಕಾರಣ ಜಮಾಅತ್ತಿನ ಕಾರ್ಯಕ್ರಮಗಳ ವೇಳೆ ಅತಿಥಿಗಳಿಗೆ ಅಡುಗೆ ತಯಾರಿಸುತ್ತಿದ್ದರು. ದಾರುಝ್ಝಿಯಾಫತ್‌ನಲ್ಲಿ ತಮ್ಮನ್ನು ಸಮರ್ಪಿಸಿಕೊಂಡು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅತಿಥಿಗಳಿಗೆ ಸೇವೆ ಸಲ್ಲಿಸುವ ಬಯಕೆ ಅವರಲ್ಲಿತ್ತು.

ಅವರ ಸೋದರಸಂಬಂಧಿಯೊಬ್ಬರು ಜಾಮಿಯಾದಲ್ಲಿ ಓದುತ್ತಿದ್ದಾರೆ. ಅವರು ಹೇಳುತ್ತಾರೆ: ಅವರು ನನ್ನನ್ನು ಭೇಟಿಯಾದಾಗಲೆಲ್ಲಾ ಎಂದಿಗೂ ವಿಶ್ವಾಸದ್ರೋಹ ಮಾಡಬೇಡಿ ಮತ್ತು ನನ್ನ ವಕ್ಫ್ ಅನ್ನು ಕೊನೆಯವರೆಗೂ ಉಳಿಸಿಕೊಳ್ಳಲು ಯಾವಾಗಲೂ ಸಲಹೆ ನೀಡುತ್ತಿದ್ದರು. ಆಗ ಮಾತ್ರ ನೀವು ನಮ್ಮ ಕುಟುಂಬಕ್ಕೆ ಗೌರವವನ್ನು ತರುತ್ತೀರಿ.

ದಿವಂಗತರು ತಂದೆ ತಾಯಿಯರನ್ನಲ್ಲದೇ ಪತ್ನಿ ಅಮತುನ್ನೂರ್ ಸಾಹಿಬಾ ಮತ್ತು ಇಬ್ಬರು ಪುತ್ರಿಯರು ಕುಮಾರಿ ಜವೇರಿಯಾ 4 ವರ್ಷ ವಯಸ್ಸು ಮತ್ತು ಕುಮಾರಿ ಝುಮಲ್ ರಾಹತ್ ಒಂದುವರೆ ವರ್ಷ ವಯಸ್ಸು ಅಗಲಿರುವರು. ಸರ್ವಶಕ್ತನಾದ ಅಲ್ಲಾಹನು ಈ ಹುತಾತ್ಮರಿಗೆ ಸ್ವರ್ಗದಲ್ಲಿ ಉನ್ನತ ಸ್ಥಾನವನ್ನು ನೀಡಲಿ. ರಹ್ಮತ್ ಹಾಗೂ ಮಗ್‌ಫಿರತ್‌ನೊಂದಿಗೆ ವರ್ತಿಸಲಿ. ಮತ್ತು ಎಲ್ಲಾ ದುಃಖಿತರಿಗೆ ತಾಳ್ಮೆಯನ್ನು ನೀಡಲಿ.

ಇದರೊಂದಿಗೆ ಸನ್ಮಾನ್ಯ ಮಲಿಕ್ ಮುಝಫ್ಫರ್ ಖಾನ್ ಸಾಹಿಬ್. ಇವರು ಕೆಲವು ದಿನಗಳ ಹಿಂದೆ 93 ವಯಸ್ಸಿನಲ್ಲಿ ನಿಧನರಾದರು – **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ದಿವಂಗತರು ಅಲ್ಲಾಹನ ಅನುಗ್ರಹದಿಂದ ವಸಿಯ್ಯತ್ ಮಾಡಿದವರಾಗಿದ್ದರು. ಅವರ ಪುತ್ರ ಸನ್ಮಾನ್ಯ ಮುಹಮ್ಮದ್ ಮುತೀಉಲ್ಲಾಹ್ ಜೂಇಯ ಸಾಹಿಬ್ ಜಮಾಅತಿನ ಮುಬಲ್ಲಿಗ್ ಆಗಿ ಹವಾಯಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ತಂದೆಯ ನಿಧನ ಮತ್ತು ದಫನ್ ಮಾಡುವ ವೇಳೆ ಅವರಿಗೆ ಭಾಗಿಯಾಗಲು ಸಾಧ್ಯವಾಗಲಿಲ್ಲ. ಮುರಬ್ಬಿ ಸಾಹಿಬ್ ಬರೆಯುತ್ತಾರೆ: ದಿವಂಗತರು ಬಹಳ ಸಾತ್ವಿಕ, ಭಕ್ತ, ನಿರ್ಗತಿಕರ ಸಹಾಯಿ, ತಹಜ್ಜುದ್ ನಿರ್ವಹಿಸುವ, ಐದು ಹೊತ್ತಿನ ನಮಾಝ್ ನಿರ್ವಹಿಸುವ, ಜಮಾಅತಿನ ಹುದ್ದೇದಾರರನ್ನು ಗೌರವಿಸುವ, ತರ್ಜುಮೆ ಸಹಿತ ಪವಿತ್ರ ಖುರ್‌ಆನ್ ಪಾರಾಯಣ ಮಾಡುವ, ಅತ್ಯಂತ ನಿಷ್ಠಾವಂತ ವ್ಯಕ್ತಿಯಾಗಿದ್ದರು. 1953 ರಲ್ಲಿ, ಇಪ್ಪತ್ನಾಲ್ಕನೇ ವಯಸ್ಸಿನಲ್ಲಿ, ಅವರು ಸ್ವತಃ ಅಹ್ಮದಿಯ್ಯತ್ ಅನ್ನು ಸ್ವೀಕರಿಸಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರನ್ನು ಸ್ವೀಕರಿಸುವುದರಿಂದ ಅವರಲ್ಲಿ ಒಂದು ಕ್ರಾಂತಿಕಾರಿ ಬದಲಾವಣೆಯನ್ನು ಉಟಾಗಿತ್ತು. ಮತ್ತು ಆ ಸಮಯದಿಂದ ಅವರು ಸರ್ವಶಕ್ತ ಅಲ್ಲಾಹನನ್ನು ಆರಾಧಿಸುವ, ಖಿಲಾಫತ್‌ನೊಂದಿಗೆ ನಿಷ್ಠೆ ಮತ್ತು ಮಾನವೀಯತೆಗೆ ಸೇವೆ ಸಲ್ಲಿಸುವ ಆದರ್ಶಪ್ರಾಯ ಜೀವನವನ್ನು ನಡೆಸಿದರು. ಜೀವನದಲ್ಲಿ ವಿವಿಧ ಹುದ್ದೆಗಳಲ್ಲಿ ಜಮಾಅತ್‌ಗೆ ಸೇವೆ ಸಲ್ಲಿಸುವ ಅವಕಾಶವೂ ನಿಮಗೆ ಲಭಿಸಿತ್ತು. ಅವರು ಹದಿನೈದು ವರ್ಷಗಳ ಕಾಲ ಉತ್ತರ ಸರ್ಗೋಧಾದಲ್ಲಿ ಅವರ ಜಮಾಅತ್ತಿನ ಚಕ್ 152 ರ ಅಧ್ಯಕ್ಷರಾಗಿದ್ದರು. ಜಮಾಅತ್ತಿನ ಯಾವುದೇ ಪದಾಧಿಕಾರಿಗಳ ಬಗ್ಗೆ ನಾವು ನಿಮ್ಮಿಂದ ಯಾವುದೇ ದೂರುಗಳನ್ನು ಕೇಳಿಲ್ಲ ಎಂದು ಅವರು ಹೇಳುತ್ತಾರೆ. 2005ರಲ್ಲಿ ವಸಿಯ್ಯತ್ ಮಾಡಲು ಮನವಿ ಮಾಡಲಾದಾಗ ಮೊದಲೇ ಮೂಸಿಯಾಗಿದ್ದ ಅವರು ತನ್ನ ಹತ್ತನೇ ಒಂದು ಭಾಗದ ವಸಿಯ್ಯತನ್ನು ವರ್ಧಿಸಿ ಮೂರನೇ ಒಂದು ಭಾಗವನ್ನಾಗಿ ಮಾಡಿಕೊಂಡರು. ಈ ರೀತಿಯಾಗಿ ಅವರು ಈ ತಹ್‌ರೀಕಿಗೆ ಲಬ್ಬೈಕ್ ಹೇಳಿಕೊಂಡರು. ತಡ ಮಾಡದೇ ಆರಂಭದಲ್ಲೇ ನೀಡುವಾಗಲೇ ಧನತ್ಯಾಗವಾಗುವುದು ಮತ್ತು ಸೆಕ್ರಟರಿ ಮಾಲ್ ನೆನಪಿಸಿಕೊಡುವ ಸ್ಥಿತಿಯನ್ನು ಉಂಟುಮಾಡಬಾರದು ಎಂದು ಅವರು ಮಕ್ಕಳನ್ನು ಉಪದೇಶಿಸುತ್ತಿದ್ದರು. 1990ರ ದಶಕದಲ್ಲಿ ನಮ್ಮ ಜಮಾಅತ್ತಿನ ಮುರಬ್ಬಿ ಸಾಹಿಬ್ ಅವರಿಗೆ ಮನೆಯ ಅಗತ್ಯವಿದ್ದಾಗ ಮಸೀದಿಯ ಸಮೀಪ ಹಾಗೂ ಗ್ರಾಮದ ಒಳಗಿದ್ದ ತಮ್ಮ ಜಮೀನನ್ನು ಮುಲಾಜಿಲ್ಲದೆ ಜಮಾಅತ್ತಿಗೆ ದಾನವಾಗಿ ನೀಡಿದ್ದರು ಎನ್ನಲಾಗಿದೆ. ಸರ್ವಶಕ್ತನಾದ ಅಲ್ಲಾಹನು ಮೃತರೊಂದಿಗೆ ಮೇಲೆ ಕರುಣೆ ಮತ್ತು ಮಗ್‌ಫಿರತ್ ನೀಡಲಿ. ಪದವಿಗಳನ್ನು ಹೆಚ್ಚಿಸಲಿ. ಅವರ ಮಕ್ಕಳಿಗೂ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲು ತೌಫೀಖ್ ನೀಡಲಿ. ಆಮೀನ್

**(ಅಲ್-ಫಝ್ಲ್ ಇಂಟರ್‌ನ್ಯಾಶನಲ್ ಡೈಲಿ, ಜುಲೈ 5, 2024, ಪುಟ 2-5)**

-------------****-------------

## ತಫ್ಸೀರೆ ಕಬೀರ್

ಹಝ್ರತ್ ಪೈಗಂಬರ್ (ಸ) ನುಡಿದರು. ನಮಾಝ್ (ಪ್ರಾರ್ಥನೆ) ಎಂಬುದು ತನ್ನ ಪ್ರಭುವಿನ ದರ್ಶನರೂಪವಾಗಿದೆ. ದರ್ಶನವು ಒಂದು ದೈವಿಕ ಅನುಗ್ರಹವಾಗಿದೆ. ತನ್ನ ಪ್ರಿಯತಮೆಯೊಡನೆ ದರ್ಶನ ಪಡೆಯುವುದು, ಯಾವ ವಿವೇಕವಂತನು ಅದನ್ನು ತೆರಿಗೆ ಅಥವ ದಂಡ ಎಂದು ಭಾವಿಸುವುದಿಲ್ಲ.

ಸಯ್ಯದನಾ ಹಝ್ರತ್ ಮುಸ್ಲಿಹ್ ಮೌಊದ್ (ರ) ಬನೀಇಸ್ರಾಯೀಲ ವಚನ 80 **ವಮಿನಲ್ಲೈಲಿ ಫತಹಜ್ಜದ್ ಬಿಹೀ ನಾಫಿಲತಲ್ಲಕ. ಅಸಾ ಅಂಯಬ್‌ಅಸಕ ರಬ್ಬುಕ ಮಖಾಮ ಮ್ಮಹ್ಮೂದಾ** ವ್ಯಾಖ್ಯಾನಿಸುತ್ತಾ ಹೇಳುತ್ತಾರೆ.

**ಫತಹಜ್ಜದ್ ಬಿಹಿ** ನಲ್ಲಿ ಹಿಜ್-ಸರ್ವನಾಮ ಪವಿತ್ರ ಖುರ್‌ಆನ್ ಕಡೆಗೆ ಹೋಗುತ್ತದೆ ಎಂದರೆ ಇದರ ತಾತ್ಪರ್ಯ ನಮಾಝಿನಲ್ಲಿ ಖುರಆನ್ ಪಠಣರ ಕಡೆ ವಿಶೇಷ ಗಮನ ನೀಡಬೇಕು. ತಹಜ್ಜದ್ ಅರ್ಥ ಮಲಗಿ ಏಳುವುದು ಎಂದಾಗಿದೆ.

ಆದ್ದರಿಂದ ತಹಜ್ಜುದ್ ನಮಾಝ್‌ಕ್ಕೋಸ್ಕರ ಮೊದಲು ಮಲಗುವುದು ಅವಶ್ಯಕವಾಗಿದೆ. ಯುವ ಜನರು ರಾತ್ರಿಯೆಲ್ಲ ಮಲಗದೆ ಬೆಲ್ಲ ಮಾಡುತ್ತಾರೆ. ಅವರದ್ದು ಅದು ಆರಾಧನೆಯಲ್ಲ. ಶರೀಅತನ್ನು ತಿರಸ್ಕಾರ ಮಾಡಿದ ಹಾಗೆ ಇಂತಹ ಆರಾಧನೆ ಪವಿತ್ರ ಖುರ್‌ಆನ್‌ನ ಆಶಯಕ್ಕೆ ವಿರುದ್ಧವಾಗಿದೆ. ರಸೂಲುಲಾಹ್ (ಸ) ಯಾವಾಗಲೂ ರಾತ್ರಿಯ ಮೊದಲ ಭಾಗದಲ್ಲಿ ಮಲಗುತ್ತಿದ್ದರು ಮತ್ತು ಕೊನೆಯ ಭಾಗದಲ್ಲಿ ಎದ್ದು ತಹಜ್ಜುದ್ ನಿರ್ವಹಿಸುತ್ತಿದ್ದರು.

ಈ ವಚನದಲ್ಲಿ ಅಲ್ಲಾಹನು ತಿಳಿಸಿದ್ದೇನೆಂದರೆ ಆರಾಧನೆಯ ಅವಕಾಶ ಮಾಡಿಕೊಡುವುದು ಒಂದು ದೈವಿಕ ಅನುಗ್ರಹವಾಗಿದೆ. ಆದರೆ ಇಂತಹ ನಮಾಝುನ್ನು ದಂಡ ಅಥವಾ ತೆರಿಗೆ ಎಂದು ಭಾವಿಸುವ ಜನರ ಮೇಲೆ ವಿಷಾದ ಎನಿಸುತ್ತದೆ. ಹಝ್ರತ್ ಪೈಗಮಬರ್ (ಸ) ನುಡಿದರು. ನಮಾಝ್ ಪ್ರಾರ್ಥನೆ ಎಂಬುದು ತನ್ನ ಪ್ರಭುವಿನ ಒಂದು ದರ್ಶನರೂಪವಾಗಿದೆ. ದರ್ಶನವು ಒಂದು ದೈವಿಕ ಅನುಗ್ರಹವಿದೆ. ತನ್ನ ಪ್ರಿಯತಮನೊಡನೆ ದರ್ಶನ ಪಡೆಯುವುದು ಯಾವ ವಿವೇಕನು ಸಹ ಅದನ್ನು ತೆರಿಗೆ ಅಥವಾ ದಂಡ ಎಂದು ಭಾವಿಸುವುದಿಲ್ಲ. ಹಝ್ರತ್ ಪೈಗಂಬರ್ (ಸ) ರವರು ಆರಾಧನೆಯ ಗುಣವೆ ಹೀಗೆ ಬಣ್ಣಿಸಿದ್ದಾರೆ. **ಕಅನ್ನಕ ತರಾಹು ವಿನ್‌ಲಮ್ ತಕುನ್ ತರಾಹು ಫಇನ್ನಹೂ ಯರಾಕ** (ಮುಸ್ಲಿಂ, ಸಂಪುಟ-1, ಕಿತಾಬುಲ್ ಈಮಾನ್) ಎಂದರೆ ಸರಿಯಾದ ನಮಾಝ್ ದೇವನನ್ನು ಕಾಣುವುದಾಗಿದೆ. ಅಥವಾ ಕನಿಷ್ಠಮಟ್ಟ ನಮಾಝಿನ ಸಮಯ ಇಷ್ಟಾದರೂ ಖಚಿತವಾಗಿರಬೇಕು, ದೇವನು ನನ್ನನ್ನು ನೋಡುತ್ತಿದ್ದಾನೆ. ಆದ್ದರಿಂದ ಇಂತಹದೊಂದು ಅನುಗ್ರಹವನ್ನು ದಂಡ ಎಂದು ಭಾವಿಸುವುದು ಘೋರ ಅಪರಾಧವಾಗಿದೆ. ನಮಾಝ್ ಅಲ್ಲಾಹನ ಉನ್ನತ ಅನುಗ್ರಹಗಳಲ್ಲಿ ಒಂದು ಅತ್ಯುನ್ನತ ಅನುಗ್ರಹವಾಗಿದೆ. ನನ್ನ ವಿಶ್ವಾಸ ಏನೆಂದರೆ. ಮನುಷ್ಯನು ಒಂದೇ ಒಂದು ನಮಾಝ್ ಬಿಟ್ಟರೂ ಸಹ ಅವನು ಪ್ರಾಮಾಣಿಕ ಎನ್ನಲು ಅರ್ಹನಲ್ಲ. ಏಕೆಂದರೆ **"ಇಖಾಮುಸ್ಸಲಾಹ್"** ಎಂಬ ಆಜ್ಞೆಯಿದೆ, ಅದು ಪ್ರಾಮಾಣಿಕತೆಯನ್ನು ಬಯಸುತ್ತದೆ. ಒಂದೇ ಒಂದು ನಮಾಝ್ ಬಿಟ್ಟು ಹೋದರೆ ಅದು ಪ್ರಾಮಾಣಿಕತೆ ಎನಿಸದು.

**ನಾಫಿಲತಲ್ಲಕ್** ಯಿಂದ ಸ್ಪಷ್ಟವಾಗುವುದೇನೆಂದರೆ ಆರಾಧನೆಯ ಅವಕಾಶ ಮಾಡಿಕೊಡುವುದು ನಮ್ಮ ಒಂದು ಉಪಕಾರವಾಗಿದೆ ಅಥವಾ ಪೂರ್ವ ಪ್ರವಾದಿಗಳ ಮೇಲೆ ಇದನ್ನು ಕಡ್ಡಾಯವಾಗಿರದೆ ಇರಬಹುದು. ಈ ಸಂದರ್ಭದಲ್ಲಿ ಇದರ ಅರ್ಥ ಏನಾಗುವುದೆಂದರೆ ಈ ಆರಾಧನೆಯ ವಿಶೇಷ ಅವಕಾಶ ನಿನಗೋಸ್ಕರ ಒಂದು ಬಹುಮಾನವಾಗಿದೆ.

**ಮಖಾಮುವ್ ಮಹಮೂದಾ** ನಲ್ಲಿ ಒಂದು ಬಹುದೊಡ್ಡ ಭವಿಷ್ಯವಾಣಿ ಮಾಡಲಾಗಿದೆ. ಲೋಕದಲ್ಲಿ ಹಝ್ರತ್ ಪೈಗಂಬರ್ (ಸ) ರವರಿಗೆ ಬೈಯುವಷ್ಟು ಬೈಗಳು ಯಾರ ಮೇಲೂ ಬೈಯಲಿಕ್ಕಿಲ್ಲ. ಡಕೇತರು, ಚರಿತ್ರಹೀನರು, ಅಶಲೀಲರು, ಎಂತಹ ದಾರಿತಪ್ಪಿದವರಿಗೆ ಬಯ್ಯುವಷ್ಟು ಬಯ್ಯುಗಳು ಇಂದಿನವರೆಗೂ ಹಝ್ರತ್ ಪೈಗಂಬರ್ (ಸ)ರವರಿಗೆ ಬಯ್ಯುತ್ತಿದ್ದಾರೆ. ಮುಖಾಮ್ ಮಹಮೂದ್ ದಯಪಾಲಿಸಿ ಅಲ್ಲಾಹನು ಆ ಬಯ್ಯುಗಳ ಪ್ರತಿಫಲ ನೀಡಿದ್ದಾನೆ. ಹೇಳಿದನು. ಎಷ್ಟೆಲ್ಲಾ ಶತ್ರುಗಳು ಬಯ್ಯುತ್ತಿದ್ದಾರೆ. ನಾವು ಸತ್ಯವಿಶ್ವಾಸಿಗಳಿಂದ ನಿನ್ನ ಪರವಾಗಿ ದುರೂದ್ ಕಳುಹಿಸಿಕೊಡುವೆವು. ಅದೇ ರೀತಿಯಲ್ಲಿ ಆಕಾಶದಿಂದ ಸ್ವಯಂ ನಾವು ನಿನ್ನನ್ನು ಸ್ತುತಿಸುವೆವು. ಹೀಗಿರುವಾಗ ಶತ್ರುಗಳ ಬಯ್ಯುಗಳು ಯಾವ ಲೆಕ್ಕಕ್ಕೆ.

ಮಖಾಮೆ ಮಹಮೂದ್ ತಾತ್ಪರ್ಯ ಶಿಫಾರಸ್ಸು ಮಾಡುವ ಹಕ್ಕನ್ನು ಪಡೆದವನು ಎಂದರ್ಥ. ಹದೀಸುಗಳಿಂದ ಸಾಬೀತಾಗುತ್ತದೆ. ಎಲ್ಲಾ ಸಮುದಯದ ಜನರು ಎಲ್ಲ ನಬಿಯರಿಂದ ನಿರುತ್ತರವಾಗಿ ರಸೂಲುಲ್ಲಾಹ್ (ಸ) ರವರ ಬಳಿ ಶಿಫಾರಸ್ಸಿಕ್ಕೋಸ್ಕರ ಬರುವರು ಆಗ ಅವರು (ಸ) ಶಿಫಾರಸ್ಸು ಮಾಡುವರು. ಹೀಗೆ ಎಲ್ಲಾ ಸಮುದಾಯದವರಿಂದ ನಿಮ್ಮ ಪೈಕಿ ವಿಶ್ವಸ ಉತ್ತೇಜಿಸಲಾಗುವುದು. ಅವರೆಲ್ಲರೂ ಇಹಲೋಕದಲ್ಲಿ ನಿಮಗೆ ಬಯ್ಯುತ್ತಿದ್ದರು. ಮುಖಾಮ್ ಮಹ್ಮೂದ್ ಎಂಬುದು ಒಂದು ಅತ್ಯಂತ ಉನ್ನತಮಯ ಸ್ಥಾನವಾಗಿದೆ.

ಮುಖಾಮೆ ಮಹ್ಮೂದ್‌ನ ತಾತ್ಪರ್ಯ ನನ್ನ ದೃಷ್ಟಿಯಲ್ಲಿ ಮಹದಿಯರ ಆಗಮನವು ಆಗಿದೆ. ಏಕೆಂದರೆ ಅದರ ಆಗಮನದ ಸಮಯ ಕುರಿತು ವಿವರ ಬಂದಿರುವುದು. ಮುಸಲ್ಮಾನರು ಇಸ್ಲಾಂ ಧರ್ಮದಿಂದ ದೂರವಾಗಿ ಮತ್ತು ಅವಿಶ್ವಾಸಿಗರ ಅವಿಶ್ವಾದರಲ್ಲಿ ಮುಂದುವರೆಯುವ ಸುದ್ದಿ ತಿಳಿಸಲಾಗಿದೆ. ಅಂತಹ ಸಮಯದಲ್ಲಿ ಅಲ್ಲಾಹನ ಈ ಜಟ್ಟಿಯ ಆಗಮನ, ಈ ಬಯ್ಗುಳಗಳನ್ನು ಸ್ತುತಿಯಲ್ಲಿ ಬದಲಾಯಿಸುವ ಉದ್ದೇಶ ಹೊಂದಿರುತ್ತದೆ. ಇದು ಮುಖಾಮೆ ಮುಹ್ಮೂದ್‌ನ ಪವಾಡವೇ ಆಗಿರುತ್ತದೆ. ನಾನು ಈ ಭಾಗ್ಯ ಪಡೆಯುವ ದೃಷ್ಠಿಯಿಂದಲೇ ರಸೂಲುಲ್ಲಾಹ್(ಸ) ರವರ ಪರಿಸ್ಥಿತಿಗಳನ್ನು ವಿವರಿಸಲು ವರ್ಷದಲ್ಲಿ ಒಂದು ದಿನ ನಿಗದಿಪಡಿಸಿದ್ದೇನೆ. ಅದರಲ್ಲಿ ಎಲ್ಲ ಸಮುದಾಯದ ಹಾಗೂ ಧರ್ಮಗಳ ಜನರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುತ್ತಾರೆ **ಅಖಿಮಿಸ್ಸಲಾತಲ್ ಆಯತೈನ್** – ಐದು ಹೊತ್ತಿನ ಮತ್ತು ತಹಜ್ಜುದ್ ನಮಾಝ್ ಬಗ್ಗೆ ವಿವರಿಸಿದ ನಂತರ ಮುಖಾವ್ ಮಹ್ಮೂದ್ ಬಗ್ಗೆ ವಿವರಿಸಲಾಗಿದೆ. ಅದರ ಉದ್ದೇಶವೇನೆಂದರೆ ಯಾವ ವ್ಯಕ್ತಿಯ ಶತ್ರುಗಳು ಹೆಚ್ಚಿರುವರೋ ಮತ್ತು ಬಯ್ಯುವವರ ಸಂಖ್ಯೆ ಹೆಚ್ಚಿರುವುದು ಅದರ ಚಿಕಿತ್ಸೆ ಅಥವಾ ಪರಿಹಾರ ಅವರೊಡನೆ ಸೆಣಸಾಟವಲ್ಲ. ಬದಲು ಇಂತಹ ಸಮಯದಲ್ಲಿ ಅಲ್ಲಾಹನ ಮೊರೆ ಹೋಗುವುದು ಮತ್ತು ಅಲ್ಲಾಹನ ಆಸ್ಥಾನದಲ್ಲಿ ಪ್ರಾರ್ಥಿಸುವುದು, ಇದು, ಆ ಗೊಂದಲಗಳು ದೂರ ಮಾಡುತ್ತದೆ. ಹೀಗೆ ಅಲ್ಲಾಹನ ಸಾನಿಧ್ಯ ಪಡೆದವರಾದರೆ ಖಂಡನೆ ಸ್ತುತಿಯಲ್ಲಿ ಮತ್ತು ಬಯ್ಗುಳಗಳು ಪ್ರಾರ್ಥನೆಸಗಳಲ್ಲಿ ಪರಿವರ್ತಿತಗೊಳ್ಳುತ್ತದೆ. ಆದ್ದರಿಂದ ರಸೂಲುಲ್ಲಾಹ್(ಸ) ರವರ ಕುರಿತು ಹಾಗೆಯೇ ಆಯಿತು. ಯಾವ ಜನರು ಅವರನ್ನು ಬಯ್ಯುತ್ತಿದ್ದರೋ ಅವರೇ ಮುಂದೆ ಅವರ ಪ್ರೇಮಿಗಳಾದರು. ಉಮ್ರೋ ಬಿನ್ ಆಸ್. ಖಾಲಿದ್, ಅಕ್ರಮ, ಪುರುಷರಿಂದ ಸ್ತ್ರೀಯರಲ್ಲಿ ಹಿಂದಾ ಅದರ ಜಲ್ವಂತ ಉದಾಹರಣೆಯಾಗಿದೆ. ಈ ಜನರು ಅವರ ಪ್ರಾರ್ಥನೆ ಫಲವಾಗಿಯೇ ಸೆಳೆಯಲ್ಪಟ್ಟರು. ಇಲ್ಲದಿದ್ದರೆ ಅವರ ಹೃದಯದಲ್ಲಿದ್ದ ಶತ್ರುತನ ದೂರ ಮಾಡುವುದು. ಮನುಷ್ಯರಿಗೆ ಸಾಧ್ಯವಿರಲಿಲ್ಲ.

ಕೆಲವು ಮೂಢರು ಹೇಳುತ್ತಾರೆ. ಹಝ್ರತ್ ಪೈಗಂಬರ್(ಸ) ರವರ ಜೀವನದಲ್ಲಿ (ನೌಝುಬಿಲ್ಲಾಹಿ ಮಿನ್ ಝಾಲಿಕ್) ಏನಾದರೂ ಕೊರತೆ ಇತ್ತೇನು? ಅದಕ್ಕಾಗಿಯೇ ಜನರು ಅವರಿಗೆ ಅಷ್ಟೊಂದು ಬಯ್ಯುತ್ತಿದ್ದರು. ನಾನು ಹೇಳುತ್ತೇನೆ. ಹಝ್ರತ್ ಪೈಗಂಬರ್ (ಸ) ರವರಿಗೆ ಬಯ್ಯುವುದು ಅವರ ಯಾವುದೇ ಕೊರತೆಯಿಂದಾಗಿರಲಿಲ್ಲ. ಬದಲು ಮಾನವಕುಲಕ್ಕಾಗಿ ಮಾದರಿಯನ್ನಾಗಿ ಮಾಡಿರಲಿಲ್ಲ. ಆದ್ದರಿಂದ ಯಾವ ನಬಿಯ ಪರಿಪೂರ್ಣ ಚರಿತ್ರೆ ಸುರಕ್ಷಿತ ಮಾಡಲಾಗಲ್ಲ. ಲೋಕದಲ್ಲಿ ಯಾವುದಾದರು ಧರ್ಮದ ಮುಖಂಡರ ಜೀವನ ಚರಿತ್ರೆ ಸವಿವರವಾಗಿ ಇದೆ ಎಂದಾದರೆ ಅದು ಕೇವಲ ಹಝ್ರತ್ ಪೈಗಂಬರ್ (ಸ) ರವರದು ಮಾತ್ರವಾಗಿದೆ. ಅವರ ಜೀವನದ ಪ್ರತಿಯೊಂದು ಘಟನೆ ಇತಿಹಾಸದಲ್ಲಿ ಪ್ರಸ್ತಾಪಿಸಲಾಗಿದೆ. ಅವರ ಊಟೋಪಾಚಾರ, ಅವರ ನಡೆದಾಡುವಿಕೆ, ಅವರ ಮಾತುಕತೆ, ಅವರು ಏಳುವುದು, ಕುಳಿತುಕೊಳ್ಳುವುದು, ಒಟ್ಟಾರೆ ಎಲ್ಲಾ ಚಲನವಲನಗಳನ್ನು ಸುರಕ್ಷಿತಗೊಳಿಸಲಾಗಿದೆ. ಅಂದರೆ ಯಾವ ರೀತಿ ಒಬ್ಬ ವ್ಯಕ್ತಿಯನ್ನು ತಪಾಸಣೆಗೆ ಒಳಪಡಿಸಲಾಗುತ್ತದೆ. ಅದೇ ರೀತಿಯಲ್ಲಿ ಅಲ್ಲಾಹನು ಹುಝೂರ್(ಸ) ಕಾರ್ಯಶೈಲಿ, ಅವರ ಭಾವನೆಗಳನ್ನು ಕ್ರೂಢಿಕರಿಸಿ ಲೋಕದ ಮುಂದೆ ಪ್ರಸ್ತುತಪಡಿಸಿದ್ದಾನೆ. ಇದರ ಹೊರತಾಗಿಯೂ ಅವರು ತನ್ನ ಶತ್ರುಗಳ ಮುಂದೆ ತಳೆದ ನಿಲುವು ಏನೆಂದರೆ, ಇದೇನು ಸಾಧಾರಣ ರೀತಿಯ ಪವಾಡವಲ್ಲ. ಪರಿಪೂರ್ಣ ಪರೀಕ್ಷೆಯ ನಂತರ ಈ ಸ್ಥಾನಮಾನ ಪಡೆದವರಾದರೆ ಅದು ಮುಖಾಮೆ ಮಹ್ಮೂದ್ ಎನ್ನದೇ ಬೇರೆ ವಿಧಿ ಇಲ್ಲ. ನಿಜ ಹೇಳಬೇಕಾದರೆ ಅವರ ಜೀವನದ ಒಂದು ದಿನದ ಘಟನೆಗಳು ಸಹ ಸುರಕ್ಷಿತಗೊಂಡಿಲ್ಲ. ಇಂತಹ ಗೌಪ್ಯ ವ್ಯಕ್ತಿತ್ವಗಳ ಬಗ್ಗೆ ವಿವರಿಸುವುದಾದರೂ ಹೇಗೆ ವಿವರಿಸುವುದು? ಆದ್ದರಿಂದ ಒಬ್ಬ ಸಮುದಾಯದವರ ಈ ಹೇಳಿಕೆ ಮತ್ತು ಅದರ ಮೇಲೆ ಸಂತೋಷಪಡುವುದು

ಅದೇನೆಂದರೆ – "ನಮ್ಮ ಪ್ರವಾದಿಯ ಮೇಲೆ ಅಷ್ಟೊಂದು ಅಪವಾದಗಳಿಲ್ಲ" ಎನ್ನುವುದು ಸಮಂಜಸವಾದ ಮಾತಲ್ಲ.

ನನ್ನ ದೃಷ್ಟಿಯಲ್ಲಿ ಅವರಿಗಾಗಿ ಮುಖಾಮೆ ಮುಹ್ಮೂದ್ ನಲ್ಲಿ ನಿಗದಿಪಡಿಸಲಾದ ಸ್ಥಾನಗಳಲ್ಲಿ ಇದು ಪ್ರಪ್ರಥಮ ಮುಖಾಮೆ ಮಹ್ಮೂದ್ ಆಗಿದೆ. ಅದು ಈ ವಚನದ ಅವತರಣೆಯ ನಂತರ ಅವರಿಗೆ ಮದೀನಾದಲ್ಲಿ ಲಭಿಸಿದೆ. ಅಲ್ಲಿಯ ಜೀವನದಿಂದಲೇ ಅವರ ಖ್ಯಾತಿ ಲೋಕದಲ್ಲೆಡೆ ಪಸರಿಸಿದೆ. ಅಂದಹಾಗೆ ಇದರ ಸಂಕೇತ ಈ ವಚನದಲ್ಲಿ ನೀಡಲಾಗಿದೆ.

**(ತಫ್ಸೀರ್ ಕಬೀರ್, ಸಂಪುಟ–4, ಪುಟ–374, ಮುದ್ರಣ 2010, ಖಾದಿಯಾನ್)**

***(ಪುಟ ಸಂಖ್ಯೆ 01ರ ಉಳಿದ ಭಾಗ)***

ಯಾವ ರೀತಿ ಒಂಟೆಯಲ್ಲಿ ನಾಗರೀಕತೆ ಮತ್ತು ಐಕ್ಯತೆಯ ಭಾವವಿರುತ್ತದೆ, ಅವರಲ್ಲಿ ಮುಂದಾಳತ್ವ ವಹಿಸಿದ ಇಮಾಮ್ ಅನ್ನು ಅನುಸರಿಸುವ ಗುಣಶಕ್ತಿ ಇರುತ್ತದೆ, ಅದೇ ರೀತಿಯಲ್ಲಿ ಮನುಷ್ಯನು ತನ್ನ ಇಮಾಮ್ ಅನ್ನು ಅನುಸರಿಸುವ ಗುಣ ಹೊಂದುವುದು ಅವಶ್ಯಕವಾಗಿರುತ್ತದೆ. ಏಕೆಂದರೆ ಒಂಟೆಯು ಅವನ ಅಧೀನದಲ್ಲಿರುತ್ತದೆ. ಅದರಲ್ಲಿಯೂ ಈ ಗುಣ ಲಭ್ಯವಾಗಿರುತ್ತದೆ. **ಕೈಫ ಖುಲಿಖತ್** ನಲ್ಲಿ ಅದರ ಉಪಯುಕ್ತತೆಯ ಬಗ್ಗೆ ಸಂಕೇತ ನೀಡಲಾಗಿದೆ. ಅದು ಒಂಟೆಗಳ ಸಮೂಹದಲ್ಲಿ ಅದರ ಐಕ್ಯತೆ ಕಾಣಬಹುದಾಗಿದೆ." **(ಮಲ್ಫೂಝಾತ್, ಸಂಪುಟ–2, ಪುಟ–18 ಸಂಚಿಕೆ 2018, ಖಾದಿಯಾನ್)**

–––––––––––––*****–––––––––––––

**ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ. ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು. ನಿಮ್ಮ ಮಕ್ಕಳನ್ನು ಜಾಮಿಯ ಅಹ್ಮದೀಯಾದಲ್ಲಿ ಶಿಕ್ಷಣವನ್ನು ಪಡೆಯಲು ಅರ್ಪಿಸಿ**

ಹಝ್ರತ್ ಅಮೀರ್–ಉಲ್–ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರು ನುಡಿಯುತ್ತಾರೆ:

ಜಮಾಅತ್ತಿನ ಅಗತ್ಯಗಳು ಹೆಚ್ಚಾದಂತೆ ತಬ್ಲೀಗಿನ ಕ್ಷೇತ್ರ ಮತ್ತು ಇತರ ಸೇವಾ ಕ್ಷೇತ್ರಗಳಲ್ಲಿ ವಾಖಿಫೀನೆ ಝಿಂದಗಿಯರ ಮತ್ತು ಮುಬಲ್ಲಿಗೀನರ (ಪ್ರಚಾರಕರು) ಅಗತ್ಯವಿದೆ. ಈ ವಿಸ್ತರಣೆಯಾಗುತ್ತಿದ್ದಂತೆ ಕೆಲಸವು ಸಹ ಹೆಚ್ಚುತ್ತಿದೆ, ಅಹ್ಮದಿಯತ್‌ನ ಸಂದೇಶ ಹರಡುತ್ತಿದೆ. ಜಗತ್ತು ಕೂಡ ಅಹ್ಮದಿಯತ್ ಅನ್ನು ಸ್ವೀಕರಿಸುತ್ತಾ ಇದೆ. ಇದರೊಂದಿಗೆ, ವಾಖಿಫೀನೆ ಝಿಂದಗಿ ಹಾಗೂ ಧರ್ಮೋಪದೇಶ ಮತ್ತು ತರಬೇತಿಯ ಕರ್ತವ್ಯವನ್ನು ನಿರ್ವಹಿಸಬಲ್ಲ ಧಾರ್ಮಿಕ ಜ್ಞಾನವನ್ನು ಹೊಂದಿರುವವರ ಅಗತ್ಯವು ಹೆಚ್ಚುತ್ತಿದೆ......... ಜಮಾಅತ್ತಿನ ಪ್ರತಿಯೊಬ್ಬ ವ್ಯಕ್ತಿಯು ಯಾವಾಗಲೂ ತಬ್ಲೀಗ್‌ನಲ್ಲಿ ಅಥವಾ ತರಬೇತಿ ನೀಡುವುದರಲ್ಲಿ ನಿರತರಾಗಿರುಲು ಸಾಧ್ಯವಿಲ್ಲ ಆದ್ದರಿಂದ, ಈ ಕೆಲಸವನ್ನು ವಿಶೇಷವಾಗಿ ಮಾಡುವ ಒಂದು ಗುಂಪು ಇರಬೇಕು ಎಂದು ಅಲ್ಲಾಹನು ಹೇಳಿರುವನು. ಇನ್ನೊಂದು ಸ್ಥಳದಲ್ಲಿ, ಉಮ್ಮತ್ತಿನ ಪ್ರತಿಯೊಬ್ಬ ವ್ಯಕ್ತಿಗೂ ಒಳ್ಳೆಯ ಕಾರ್ಯಗಳನ್ನು ಹರಡುವ, ಕೆಟ್ಟದ್ದನ್ನು ತಡೆಯುವ ಮತ್ತು ಅಲ್ಲಾಹನ ಕಡೆಗೆ ಅಹ್ವಾನಿಸುವ ಕರ್ತವ್ಯವನ್ನು ಪೂರೈಸುವ ಜವಾಬ್ದಾರಿಯನ್ನು ವಹಿಸಲಾಗಿದೆ. ಆದರೆ ಮತ್ತೆ ಹೇಳಿರುವುದು ಏಕೆಂದರೆ ಪ್ರಪಂಚದ ವ್ಯವಸ್ಥೆಯನ್ನು ಸಹ ನಡೆಸಬೇಕಾಗಿದೆ, ಆದ್ದರಿಂದ ಅದರಲ್ಲಿ ತೊಡಗಿರುವವರು ಯಾವಾಗಲೂ ಸಮಯವನ್ನು ನೀಡಲು ಸಾಧ್ಯವಿಲ್ಲ. ಧರ್ಮೋಪದೇಶ ಮತ್ತು ತರಬೇತಿಯ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡುವ ಮನೋಧರ್ಮ ಎಲ್ಲರಿಗೂ ಇರುವುದಿಲ್ಲ. ಮತ್ತು ಉಮ್ಮತ್ತಿನ ಎಲ್ಲಾ ಸದಸ್ಯರು ಧರ್ಮ ಮುಬಲ್ಲಿಗ್ ಮತ್ತು ಮುರಬ್ಬಿಯವರಿಗೆ ಅಗತ್ಯವಾದ ಧರ್ಮದ ತಿಳುವಳಿಕೆಯನ್ನು ಪಡೆಯಲು ಸಾಧ್ಯವಿಲ್ಲ. ಮತ್ತು ಎಲ್ಲಾ ಜನರಿಗೆ ವಿಶೇಷ ಗಮನದಿಂದ ತರಬೇತಿಯು ಸಹ ನೀಡಲು ಸಾಧ್ಯವಾಗುವುದಿಲ್ಲ. ಆದ್ದರಿಂದ, ಸರ್ವಶಕ್ತನಾದ ಅಲ್ಲಾಹನ ಆದೇಶಗಳನ್ನು, ಅನುಸರಿಸಬೇಕಾದ ಆಜ್ಞೆಗಳನ್ನು ಮತ್ತು ತಡೆಯಬೇಕಾದ ನಿಷೇಧಗಳನ್ನು ಪರಿಚಯ ಮಾಡಿಕೊಳ್ಳಲು, ಮತ್ತು ಅದರ ಆಳವಾದ ಬುದ್ಧಿವಂತಿಕೆಯನ್ನು ಕಲಿಯಲು ಮತ್ತು ನಂತರ ಅದನ್ನು ಹರಡಲು. ಧರ್ಮವನ್ನು ಪೂರ್ಣ ಗಮನದಿಂದ ಕಲಿಯುವ ಒಂದು ವಿಶೇಷ ಗುಂಪು ಇರಬೇಕು. ಮಾಶಾಅಲ್ಲಾಹ್, ತಮ್ಮ ಅಭಿರುಚಿ ಮತ್ತು ಹವ್ಯಾಸಗಳಿಂದ ಲೌಕಿಕ ಶಿಕ್ಷಣದ ಜೊತೆಗೆ ಧಾರ್ಮಿಕ ಜ್ಞಾನದ ಬಗ್ಗೆ ಉತ್ತಮ ತಿಳುವಳಿಕೆಯನ್ನು ಹೊಂದಿರುವ ಅನೇಕ ಜನರು ಜಮಾತ್‌ನಲ್ಲಿದ್ದಾರೆ. ಆದರೆ ಕೆಲವೊಮ್ಮೆ ಅಥವ ಸಾಮಾನ್ಯವಾಗಿಯೇ ಅವರ ಇತರ ಕಾರ್ಯಗಳ ಕಾರಣದಿಂದಾಗಿ ಸಮಯವನ್ನು ನೀಡುಲು ನಿರಂತರವಾಗಿ ಸಾಧ್ಯವಾಗುವುದಿಲ್ಲ. ಅದಾಗ್ಯೂ, ಸರ್ವಶಕ್ತನಾದ ಅಲ್ಲಾಹನು ಹೇಳುತ್ತಾನೆ, ಧರ್ಮದ ಕೆಲಸಕ್ಕಾಗಿ ವಾಖಿಫೀನೆ ಝಿಂದಗಿಯರ ಗುಂಪು ಇರಬೇಕು ಮತ್ತು ಇಸ್ಲಾಂ ಸಾರ್ವತ್ರಿಕ ಧರ್ಮವಾಗಿರುವುದರಿಂದ ಅದು ಪ್ರತಿಯೊಂದು ಪಂಗಡದಿಂದ, ಅಂದರೆ ಪ್ರತಿಯೊಂದು ಗುಂಪಿನಿಂದ, ಪ್ರತಿ ವರ್ಗದಿಂದ, ಪ್ರತಿಯೊಂದು ವಿಭಾಗದಿಂದ ಜನರ ಜನರ ಗುಂಪು ಇರಬೇಕು. ತದನಂತರ ಮತ್ತಷ್ಟು ವಿಸ್ತರಿಸಿದರೆ, ಪ್ರತಿಯೊಂದು ಖೌಮಿನ(ಗೋತ್ರದಿಂದ) ಜನರು ಧರ್ಮವನ್ನು ಕಲಿಯಬೇಕು ಮತ್ತು ಮುಂದೆ ಕಲಿಸಬೇಕು ಎಂದು ಹೇಳಿರುವನು. ಪ್ರತಿಯೊಂದು ಖೌಮಿನವರು ಮತ್ತು ಪ್ರತಿಯೊಂದು ವರ್ಗವು ವಿಭಿನ್ನ ಮನೋಧರ್ಮ, ಮನೋವಿಜ್ಞಾನ ಮತ್ತು ವಿಧಾನವನ್ನು ಹೊಂದಿದೆ. ಅದಕ್ಕೆ ತಕ್ಕಂತೆ ಉಪದೇಶ ಮಾಡುವ ವಿಧಾನವನ್ನು ಕೈಗೊಳ್ಳಬೇಕು. ಈ ರೀತಿಯಲ್ಲಿ, ತಬ್ಲೀಗ್ ಮತ್ತು ತರಬೇತಿಯು ಸುಲಭವಾಗುತ್ತದೆ. ಏನೇ ಇರಲಿ, ಸರ್ವಶಕ್ತನಾದ ಅಲ್ಲಾಹನು ತಬ್ಲೀಗಿಗಾಗಿ ಮತ್ತು ತರಬೇತಿಗಾಗಿ ಕಾರ್ಯವನ್ನು ನಿರ್ವಹಿಸುವ ವಿಶ್ವಾಸಿಗಳ ಗುಂಪು ಇರಬೇಕು ಮತ್ತು ನಂತರ ಪ್ರತಿಯೊಂದು ಖೌಮು ಮತ್ತು ಪ್ರತಿಯೊಂದು ವರ್ಗದ ಜನರು ಇರಬೇಕು ಇದರಿಂದ ಈ ಕಾರ್ಯವನ್ನು ಸುಗಮಗೊಳಿಸಬಹುದು ಎಂದು ನಮಗೆ ಮಾರ್ಗದರ್ಶನ ನೀಡಿರುವನು.

ಆದುದರಿಂದ ಅಹ್ಮದಿಯಾ ಜಮಾಅತ್ ಈ ತತ್ವದಡಿಯಲ್ಲಿ ಧರ್ಮಕ್ಕಾಗಿ ತನ್ನ ಜೀವನವನ್ನು ಮುಡಿಪಾಗಿಡುವ ವ್ಯವಸ್ಥೆಯನ್ನು ಹೊಂದಿದೆ. ಮತ್ತು ನಾನು ಹೇಳಿದಂತೆ, ಅಲ್ಲಾಹನ ಅನುಗ್ರಹದಿಂದ ವಿವಿಧ ಖೌಮುಗಳು ಮತ್ತು ವರ್ಗಗಳ ಜನರು ಈಗ ಈ ವ್ಯವಸ್ಥೆಯ ಭಾಗವಾಗಿದ್ದಾರೆ ಮತ್ತು ಆಗುತ್ತಿದ್ದಾರೆ. ಮತ್ತು ನಾನು ಹೇಳಿದಂತೆ, ಜಮಾಅತ್ತಿನ ಅಗತ್ಯತೆಗಳು ಹೆಚ್ಚಾದಂತೆ, ಈ ಸಂಖ್ಯೆಯ ಅಗತ್ಯವು ಹೆಚ್ಚಾಗುತ್ತದೆ ಮತ್ತು ಈ ಅಗತ್ಯವು ಬೆಳೆಯುತ್ತಲೇ ಇರುತ್ತದೆ. ಇದೀಗ ಪ್ರಸ್ತುತ ಕಾಲದಲ್ಲಿ ಅಗತ್ಯವಿರುವುದು ಮಾತ್ರವಲ್ಲದೆ ಭವಿಷ್ಯದಲ್ಲಿಯು ಇದರ ಅಗತ್ಯವು ಹೆಚ್ಚಾಗಲಿದೆ.

**(ಖುತ್‌ಬ ಜುಮುಅ, ಅಕ್ಟೋಬರ್ 22, 2010) (ಇಂಚಾರ್ಜ್ ನಝ್ರೆ ನೌ ವಿಭಾಗ ಭಾರತ)**

***ವಿಶೇಷ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದಾರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.

ಮೊಬೈಲ್ ಸಂಖ್ಯೆ: 9760468663 (ವ್ಯವಸ್ಥಾಪಕರು)

**ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ರಕ್ಷಿಸಿರಿ**

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಕಾಲದ ಸ್ಮರಣೀಯ ಪತ್ರಿಕೆ. **"ಅಖ್ಬಾರ್ ಬದರ್"** 1952 ರಿಂದ ಸತತವಾಗಿ ಖಾದಿಯಾನ್ ದಾರುಲ್‌ಅಮಾನಿನಿಂದ ಪ್ರಕಟಗೊಳ್ಳುತ್ತಿದೆ ಮತ್ತು ಅಹ್ಮದೀಯರ ಆಧ್ಯಾತ್ಮಿಕ ಅವಶ್ಯಕತೆಗಳನ್ನು ಪೂರೈಸುತ್ತಿದೆ. ಇದರಲ್ಲಿ ಪವಿತ್ರ ಖುರ್‌ಆನಿನ ಆಯತ್‌ಗಳು, ಪ್ರವಾದಿ ಸಲ್ಲಲ್ಲಾಹು ಅಲೈಹಿವಸಲ್ಲಮರ ಹದೀಸ್‌ಗಳು, ಹಝ್ರತ್ ಮಸೀಹ್ ಮೌಊದ್[ಅ]ರ ಮಲ್‌ಫೂಝಾತ್ ಮತ್ತು ಬರವಣಿಗೆಗಳಲ್ಲದೆ ಹುಝೂರ್ ಅನ್ವರ್[ಅತಬಿಅ]ರವರ ಹೊಸ ಖುತ್‌ಬ ಜುಮುಅ, ಉಪನ್ಯಾಸಗಳು, ಸಂದೇಶಗಳು, ಖುತ್‌ಬ ಜುಮುಅ ಪ್ರಶ್ನೋತ್ತರದ ರೂಪದಲ್ಲಿ ಮತ್ತು ಹುಝೂರ್ ಅನ್ವರ್‌ರವರ ಪ್ರವಾಸದ ವರದಿಗಳು, ಅದೇ ರೀತಿ ಆಧ್ಯಾತ್ಮಿಕ ಮತ್ತು ಲೌಕಿಕ ಜ್ಞಾನಗಳ ಸಂಪತ್‌ಭರಿತ ವರದಿಗಳು ಇರುತ್ತದೆ. ಅವುಗಳನ್ನು ಅಧ್ಯಯನ ಮಾಡುವುದು, ಅವುಗಳನ್ನು ಅನ್ಯರಿಗೆ ತಲುಪಿಸುವುದು ಮತ್ತು ಅದರಿಂದ ತಮ್ಮ ಮತ್ತು ತಮ್ಮ ಮಕ್ಕಳ, ಕುಟುಂಬದವರ ತರಬೇತಿ ಮಾಡುವುದು ನಮ್ಮ ಕರ್ತವ್ಯವಾಗಿದೆ. ಈ ಎಲ್ಲಾ ಉದ್ದೇಶಗಳನ್ನು ಪಡೆಯುವುದಕ್ಕೆ ಅಖ್ಬಾರೆ ಬದರ್‌ನ ಸಂಚಿಕೆಗಳನ್ನು ಕಾಪಾಡುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಆಧ್ಯಾತ್ಮಿಕ ಜ್ಞಾನ ಮತ್ತು ತರಬೇತಿಯನ್ನೂ ಒಳಗೊಂಡಿರುವ ಈ ಪವಿತ್ರವಾದ ಪತ್ರಿಕೆಯ ಅವಶ್ಯಕತೆ ಏನೆಂದರೆ ಅದನ್ನು ಗೌರವಿಸಬೇಕು. ಆದ್ದರಿಂದ ಇದನ್ನು ರದ್ದಿಗೆ ಹಾಕುವುದು ಅದರ ಪಾವಿತ್ರ್ಯತೆಯನ್ನು ಚದುರಿಸುವ ಸಮಾನವಾಗಿದೆ. ಅದನ್ನು ರಕ್ಷಿಸಲು ಕಷ್ಟವಾಗುತ್ತಿದ್ದರೆ ಅದನ್ನು ಎಚ್ಚರಿಕೆಯಿಂದ ನಾಶಮಾಡಿರಿ. ಏಕೆಂದರೆ ಹೀಗೆ ಆ ಪವಿತ್ರ ಬರಹಗಳು ಅವಮಾನವಾಗಬಾರದು. ಅಹ್ಮದಿ ಸದಸ್ಯರೆಲ್ಲರೂ ಈ ಬಗ್ಗೆ ವಿಶೇಷ ಗಮನ ಹರಿಸುತ್ತೀರ ಮತ್ತು ಇದರಿಂದ ಉಪಯೋಗ ಗಳಿಸುವಿರೀ ಎಂದು ಆಶಿಸುತ್ತೇವೆ.

**(ಸಂಪಾದಕರು)**

**ಈದ್ ಮತ್ತು ಜುಮುಅ ಒಂದೇ ದಿನ ಬಂದರೆ, ಅದರ ಬಗ್ಗೆ**

ಪ್ರವಾದಿ ಮುಹಮ್ಮದ್(ಸ)ರ ಸುನ್ನತ್ ಮತ್ತು ಖುಲಫಾ ಎ ರಾಶಿದೀನ್ ಹಾಗೂ ಪ್ರವಾದಿ(ಸ) ಅವರ ಸಹಾಬರವರ ನಂಬಿಕೆಯು ಹೀಗಿತ್ತು ಅಂದರೆ ಅವರೆಲ್ಲರೂ ಅಂದು ಈದ್ ನಮಾಝ್ ನಿರ್ವಹಿಸಿದ ನಂತರ ಜುಮುಅದ ನಮಾಝನ್ನು ಸಮಯಕ್ಕೆ ಸರಿಯಾಗಿ ನಿರ್ವಹಿಸಿದರು.

ಹಾಗೂ ದೂರದ ಪ್ರದೇಶಗಳಿಂದ ಬರುವವರಿಗೆ ಜುಮುಅದ ನಮಾಝಿನಲ್ಲಿ ಬಿಡುವು ನೀಡಿ, ಅವರವರ ಪ್ರದೇಶದಲ್ಲೇ ಝುಹರ್ ನಮಾಝನ್ನು ನಿರ್ವಹಿಸುವಂತೆ ಸೂಚನೆ ನೀಡಿದರು.

**ಆದ್ದರಿಂದ, ಈದ್ ಮತ್ತು ಜುಮುಅ ಒಂದೇ ದಿನದಲ್ಲಿ ಒಟ್ಟುಗೂಡಿದರೆ, ಈದ್ ನಮಾಝ್ ನಿರ್ವಹಿಸಿದ ನಂತರ ಒಂದು ವೇಳೆ ಜುಮುಅ ನಮಾಝ್ ನಿರ್ವಹಿಸದಿದ್ದರೆ ಝುಹರ್ ನಮಾಝನ್ನು ಅದರ ಸಮಯದಲ್ಲಿ ನಿರ್ವಹಿಸಬೇಕು.**

ನಮಾಝ್ ಮತ್ತು ಉಪವಾಸವು ಆರಾಧನೆಯ ಭೌತಿಕ ಕ್ರಿಯೆಗಳಾಗಿವೆ, ಆದ್ದರಿಂದ ಅವರ ಪ್ರತಿಫಲವು ಈ ಆರಾಧನೆಯ ಕಾರ್ಯಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ.

ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ

ಆದಾಗ್ಯೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವನ್ನು ನೀಡುವ ಏನನ್ನಾದರೂ ಕೆಲಸ ಮಾಡಿದರೆ ಅದು ಸದಖ ಜಾರಿಯ ಎಂದು ಪರಿಗಣಿಸಲಾಗುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

ಹದೀಸ್ ಗ್ರಂಥಗಳಲ್ಲಿ, ಹಝ್ರತ್ ಆಯಿಷಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ಸತ್ತವರ ಪರವಾಗಿ ಉಪವಾಸ ಮಾಡ ಬೇಡಿ ಎಂಬ ವರದಿಗಳು ದೊರೆಯುತ್ತದೆ ಆದರೆ ಅವರ ಪರವಾಗಿ ಆಹಾರ ತಿನ್ನಿಸಿರಿ ಎಂಬ ಉಲ್ಲೇಖಗಳಿವೆ.

## ಸಯ್ಯಿದುನಾ ಹಝ್ರತ್ ಅಮೀರುಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ಕೇಳಲಾದ ಪ್ರಶ್ನೆಗಳಿಗೆ ವಿಶ್ವಾಸ ವರ್ಧಕ ಉತ್ತರಗಳ

**ಗಮನಿಸಿ:** ಸಯ್ಯಿದುನಾ ಹಝ್ರತ್ ಅಮೀರಲ್ ಮೊಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ) ಅವರಿಗೆ ವಿವಿಧ ಸಂದರ್ಭಗಳಲ್ಲಿ ಪತ್ರಗಳಲ್ಲಿ ಹಾಗೂ ಎಂ.ಟಿ.ಎ ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಖ ಸಮಸ್ಯೆಗಳ ಬಗ್ಗೆ ಕೇಳಲಾದ ಪ್ರಶ್ನೆಗಳ ಬಗ್ಗೆ ನೀಡಿದ ಮಾರ್ಗದರ್ಶನ ಹಾಗೂ ಉತ್ತರಗಳನ್ನು ಓದುಗರ ಅನುಕೂಲಕ್ಕಾಗಿ ಅಲ್-ಫ಼ಜಲ್ ಇಂಟರ್ನ್ಯಾಷನಲ್‌ಗೆ ಧನ್ಯವಾದಗಳೊಂದಿಗೆ ಪ್ರಕಟಿಸಲಾಗುತ್ತಿದೆ. (ಸಂಸ್ಥೆ)

**ಪ್ರಶ್ನೆ:** ಸ್ನೇಹಿತರೊಬ್ಬರು ಹುಝೂರ್ ಅನ್ವರ್(ಅತಬಿಅ) ಅವರನ್ನು Short Sellingನ ಹಲಾಲ್ ಮತ್ತು ಹರಾಮ್‌ನ ಬಗ್ಗೆ ಮಾರ್ಗದರ್ಶನ ನೀಡುವಂತೆ ಕೇಳಿದ್ದಾರೆ? ಅದಕ್ಕೆ ಹುಝೂರ್ ಅನ್ವರ್(ಅತಬಿಅ) ಅವರು 16 ಮೇ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಹೇಳಿದರು:

**ಉತ್ತರ:** ವಾಸ್ತವವಾಗಿ, Short Selling ಅನ್ನು ತ್ವರಿತ ಹಣವನ್ನು ಗಳಿಸುವ ಸುಲಭವಾದ ಮಾರ್ಗವೆಂದು ಪರಿಗಣಿಸಲಾಗುತ್ತದೆ, ಇದರಲ್ಲಿ ಕೆಲವರು ಷೇರುಗಳನ್ನು ದಲ್ಲಾಳಿಗಳಿಂದ ಸಾಲವಾಗಿ ಪಡೆದು ಮಾರುಕಟ್ಟೆಯಲ್ಲಿ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಾರೆ ಮತ್ತು ನಂತರ ಷೇರುಗಳು ಅಗ್ಗವಾದಾಗ ಮಾರುಕಟ್ಟೆಯಿಂದ ಖರೀದಿಸಿ ದಲ್ಲಾಳಿಗಳಿಗೆ ಹಿಂದಿರುಗಿಸುತ್ತಾರೆ. ಪರಿಣಾಮವಾಗಿ, ಅವರು ಲಾಭದ ಒಂದು ಭಾಗವನ್ನು ಗಳಿಸುತ್ತಾರೆ ಮತ್ತು ದಲ್ಲಾಳಿಗಳಿಗೆ ಒಂದು ಭಾಗವನ್ನು ಕಮಿಷನ್ ಆಗಿ ನೀಡುತ್ತಾರೆ.

ಇಸ್ಲಾಂ ಧರ್ಮವು ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ಮನುಷ್ಯನಿಗೆ ಮಾರ್ಗದರ್ಶನ ನೀಡಿದಂತೆ, ಸ್ಪಷ್ಟ ಮತ್ತು ನೇರವಾದ ಮಾರ್ಗವನ್ನು ಹಿಡಿಯಲು ಮತ್ತು ವ್ಯವಹಾರದಲ್ಲಿ ಪ್ರಾಮಾಣಿಕವಾಗಿ ಮತ್ತು ಮೊಂಡುತನದಿಂದ ಮಾತನಾಡಲು ಸೂಚನೆ ನೀಡಿದ್ದಾರೆ. ಆದ್ದರಿಂದ, ನಿಮ್ಮ ವ್ಯವಹಾರದ ಸಾಮಗ್ರಿಗಳಲ್ಲಿ ಯಾವುದೇ ದೋಷವಿದ್ದರೆ ಅದನ್ನು ರಹಸ್ಯವಾಗಿಡಬೇಡಿ ಬದಲಿಗೆ ಈ ದೋಷವನ್ನು ಗ್ರಾಹಕರಿಗೆ ಸ್ಪಷ್ಟವಾಗಿ ತಿಳಿಸಿ ಎಂದು ಪವಿತ್ರ ಪ್ರವಾದಿ(ಸ) ವ್ಯಾಪಾರದ ವಿಷಯದಲ್ಲಿ ಸೂಚನೆ ನೀಡಿದರು. (ಸಾಹಿಹ್ ಮುಸ್ಲಿಂ, ಕಿತಾಬ್ ಅಲ್-ಇಮಾನ್ ಅಧ್ಯಾಯ ಮುನ್ ಘಷ್ನಾ ಫಾಲಿಸ್ ಮಿನ್ನ) ಅಳತೆ ಮತ್ತು ತೂಕಯನ್ನು ಪೂರ್ಣವಾಗಿ ಇರಿಸಿ, ಅದರಲ್ಲಿ ಯಾವುದೇ ಕೊರತೆಯನ್ನು ಮಾಡಬೇಡಿ. ಮತ್ತು ನೀವು ಅವುಗಳನ್ನು ಸ್ವಾಧೀನಪಡಿಸಿಕೊಳ್ಳುವವರೆಗೆ ಸರಕುಗಳನ್ನು ಮಾರಾಟ ಮಾಡಬೇಡಿ. (ಸಾಹಿಹ್ ಅಲ್-ಬುಖಾರಿ, ಕಿತಾಬ್ ಅಲ್-ಬುಯು, ಅಧ್ಯಾಯ ಅಲ್-ಕೈಲ್, ಅಲಿ ಅಲ್-ಬಾಯಿ ವಲ್-ಮತ)

ಆದ್ದರಿಂದ, ಪ್ರತಿ ವ್ಯವಹಾರವನ್ನು ಕೂಲಂಕುಷವಾಗಿ ಸಂಶೋಧನೆ ಮಾಡಿದ ನಂತರ ಮಾಡಬೇಕು, ಇದರಿಂದ ಒಬ್ಬ ವ್ಯಕ್ತಿಯು ಮೋಸಹೋಗುವುದಿಲ್ಲ ಅಥವಾ ಇನ್ನೊಬ್ಬ ವ್ಯಕ್ತಿಯನ್ನು ಮೋಸಗೊಳಿಸುವುದಿಲ್ಲ, ಶಾರ್ಟ್ ಸೆಲ್ಲಿಂಗ್ ವ್ಯವಹಾರದಲ್ಲಿ, ಖರೀದಿದಾರನು ಕಂಪನಿಗಳ ಮಟ್ಟದಲ್ಲಿ ಮತ್ತು ವೈಯಕ್ತಿಕವಾಗಿ ವಂಚನೆಗೊಳಗಾಗುತ್ತಾನೆ. ಬೆಲೆ ಕುಸಿಯುವ ಷೇರುಗಳು ಕೆಲವು ದಿನಗಳ ನಂತರ ಈ ಷೇರುಗಳ ಬೆಲೆ ಕುಸಿದಾಗ, ಅವುಗಳನ್ನು ಅಗ್ಗದ ಬೆಲೆಗೆ ಖರೀದಿಸಲಾಗುತ್ತದೆ ಮತ್ತು ಷೇರುಗಳನ್ನು ಮೂಲ ಮಾಲೀಕರಿಗೆ ಹಿಂತಿರುಗಿಸಲಾಗುತ್ತದೆ ಎಂಬ ಉದ್ದೇಶದಿಂದ ಮಾರಾಟ ಮಾಡಲಾಗುತ್ತದೆ. ಈ ಷೇರುಗಳ ಬೆಲೆ ಕೆಲವೇ ದಿನಗಳಲ್ಲಿ ಕುಸಿಯುತ್ತದೆ ಎಂದು ತಿಳಿದಂತೆ, ಈ ಷೇರುಗಳನ್ನು ಖರೀದಿದಾರನಿಗೆ ಕತ್ತಲೆಯಲ್ಲಿಟ್ಟು ಮಾರಾಟ ಮಾಡಲಾಗುತ್ತದೆ.

ಜೊತೆಗೆ ಶೇರು ಮಾರುಕಟ್ಟೆಗೆ ಸಂಬಂಧಿಸಿದ ವಿವಿಧ ವ್ಯವಹಾರಗಳಲ್ಲಿ ಶಾರ್ಟ್ ಸೆಲ್ಲಿಂಗ್ ಬ್ಯುಸಿನೆಸ್ ಒಂದರ್ಥದಲ್ಲಿ ಜೂಜಿನಂತೆಯೇ ಇರುವುದರಿಂದ ಕೆಲವೊಮ್ಮೆ ಸಣ್ಣ ಮಾರಾಟಗಾರರು ಸ್ವಲ್ಪ ಸಮಯದ ಹಿಂದೆ ಗೇಮ್ ಸ್ಟಾಪ್ ರೀತಿಯಲ್ಲಿ ಲಾಭ ಗಳಿಸುವ ಬದಲು ಭಾರಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಷೇರುಗಳ ಸಂದರ್ಭದಲ್ಲಿ.

ಆದ್ದರಿಂದ, ಇಸ್ಲಾಮಿಕ್ ಬೋಧನೆಗಳ ಬೆಳಕಿನಲ್ಲಿ, ಮುಮಿನ್ (ನಂಬಿಕೆಯುಳ್ಳ) ಉದ್ಯಮಿಯು ತನ್ನನ್ನು ತಾನು ಮೋಸಗೊಳಿಸಬಾರದು ಅಥವಾ ಇತರರನ್ನು ಮೋಸಗೊಳಿಸಬಾರದು, ಆದರೆ ಶುದ್ಧವಾಗಿ ವ್ಯಾಪಾರ ಮಾಡುವ ಮೂಲಕ ಆರ್ಥಿಕ ಲಾಭವನ್ನು ಗಳಿಸುವುದು ಮತ್ತು ತನ್ನ ಭಗವಂತನನ್ನು ಮೆಚ್ಚಿಸುವುದು.

**ಪ್ರಶ್ನೆ:** ಒಬ್ಬ ಅರಬ್ ಮಹಿಳೆ ಹುಝೂರ್ ಅನ್ವರ್(ಅತಬಿಅ) ಅವರ ಸೇವೆಯಲ್ಲಿ ಬರೆದಿದ್ದಾರೆ, ಯಾರಾದರೂ ಸತ್ತರೆ ಮತ್ತು ಅವನ ಕೆಲವು ಉಪವಾಸಗಳು ಉಳಿದಿದ್ದರೆ, ಅವನ ಮಕ್ಕಳು ಈ ಉಪವಾಸಗಳನ್ನು ಅವನ ಪರವಾಗಿ ಇಡಬಹುದು ಎಂದು ಹದೀಸ್‌ನಲ್ಲಿ ಉಲ್ಲೇಖಿಸಲಾಗಿದೆ. ಈ ಬಗ್ಗೆ ಜಮಾಅತ್ತಿನ ನಿಲುವೇನು? ಹುಝೂರ್ ಅನ್ವರ್(ಅತಬಿಅ) ಅವರು 24 ಮೇ 2021 ರ ಪತ್ರದಲ್ಲಿ ಈ ಕೆಳಗಿನ ಸೂಚನೆಗಳನ್ನು ನೀಡಿದ್ದಾರೆ. ಹುಝೂರ್ ಅನ್ವರ್(ಅತಬಿಅ) ಹೇಳಿದರು.

**ಉತ್ತರ:** ನಮಾಝ್ ಮತ್ತು ಉಪವಾಸವು ಆರಾಧನೆಯ ದೈಹಿಕ ಕ್ರಿಯೆಗಳು, ಆದ್ದರಿಂದ ಅದರ ಪ್ರತಿಫಲವು ಈ ಆರಾಧನೆಗಳನ್ನು ನಿರ್ವಹಿಸುವ ವ್ಯಕ್ತಿಯನ್ನು ತಲುಪುತ್ತದೆ. ಆದ್ದರಿಂದ, ನಮ್ಮ ಪ್ರಕಾರ, ಸತ್ತವರ ಪರವಾಗಿ ನಮಾಝ್ ನಿರ್ವಹಿಸುವುದು ಮತ್ತು ಉಪವಾಸ ಮಾಡುವುದು ಸತ್ತವರ ಮಕ್ಕಳ ಜವಾಬ್ದಾರಿಯಲ್ಲ.

ಹಝ್ರತ್ ಇಮಾಮ್ ಅಬು ಹನೀಫಾ, ಇಮಾಮ್ ಮಲಿಕ್ ಮತ್ತು ಇಮಾಮ್ ಶಾಫಿ ಸೇರಿದಂತೆ ಹೆಚ್ಚಿನ ನ್ಯಾಯಶಾಸ್ತ್ರಜ್ಞರು ಈ ಉಪವಾಸಗಳನ್ನು ಮಾನ್ಯವೆಂದು ಪರಿಗಣಿಸುವುದಿಲ್ಲ ಮತ್ತು ಉಪವಾಸವು ಭೌತಿಕ ಆರಾಧನೆಯ ಕ್ರಮವಾಗಿದೆ, ಇದು ಷರೀಯತ್ತಿನ ತತ್ವಗಳ ಪ್ರಕಾರ ಕಡ್ಡಾಯವಾಗಿದೆ ಎಂಬ ವಾದವನ್ನು ಅವರು ಹೊಂದಿದ್ದಾರೆ. (ಅಲ್-ಫಿಖ್ಹುತುಲ್ ಇಸ್ಲಾಮಿಯ ವ ಅದ್ಲ, ಕಿತಾಬುಸ್ಸೌಮ್, ಡಾ. ವಹ್ಬತ್ ಅಲ್-ಝುಹಿಲಿ ಅವರಿಂದ)

ಹದೀಸ್ ಪುಸ್ತಕಗಳಲ್ಲಿ ಈ ರೀತಿಯ ವರದಿಗಳ ನಿರೂಪಣೆಗಳಿಗೆ ಸಂಬಂಧಿಸಿದಂತೆ, ಹದೀಸ್ ವಿದ್ವಾಂಸರು ಮತ್ತು ವ್ಯಾಖ್ಯಾನಕಾರರು ಈ ಹದೀಸ್‌ಗಳ ವ್ಯಾಖ್ಯಾನದಲ್ಲಿ ವಿಭಿನ್ನ ಹದೀಸ್‌ಗಳನ್ನು ಉಲ್ಲೇಖಿಸಿದ್ದಾರೆ. ಉದಾಹರಣೆಗೆ ಸತ್ತವರ ಕಡೆಯಿಂದ ಆತನ ಪರವಾಗಿ ಆತನ ಮಕ್ಕಳು ಉಪವಾಸ ಅನುಷ್ಠಿಸಬೇಕೆಂಬ ವರದಿಯು ಹಝ್ರತ್ ಆಯಿಶಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರ ಕಡೆಯಿಂದ ವರದಿ ಮಾಡಿದ್ದಾರೆ, ಆದರೆ ಹದೀಸ್ ಗ್ರಂಥಗಳಲ್ಲಿ ಹಝ್ರತ್ ಆಯಿಶಾ(ರ) ಮತ್ತು ಹಝ್ರತ್ ಇಬ್ನ್ ಅಬ್ಬಾಸ್(ರ) ಅವರ ಕಡೆಯಿಂದ ಸತ್ತವರ ಪರವಾಗಿ ಉಪವಾಸ ಮಾಡಬಾರದು, ಆದರೆ ಅವರ ಊಟ ಮಾಡಿಸುವ ಬಗ್ಗೆ ವರದಿಗಳು ಇವೆ. (ಫತ್ ಅಲ್-ಬಾರಿ ಶರ್ಹ್ ಸಹೀಹ್ ಅಲ್-ಬುಖಾರಿ, ಕಿತಾಬ್ ಅಲ್-ಸೌಮ್) ಅದೇ ರೀತಿ, ಹಝ್ರತ್ ಇಬ್ನ್ ಅಬ್ಬಾಸ್(ರ) ಅವರು ವರದಿ ಮಾಡಿರುವಂತಹ ಅನೇಕ ವರದಿಗಳಲ್ಲಿ ಅನೇಕ ವ್ಯತ್ಯಾಸಗಳಿವೆ. ಹಾಗಾಗಿ ಒಂದೆಡೆ ಪ್ರಶ್ನಿಸುವವರು ಪುರುಷ ಮತ್ತೊಂದೆಡೆ ಮಹಿಳೆ ಇದ್ದಾರೆ. ಅದೇ ರೀತಿ ಉಪವಾಸಗಳ ಬಗ್ಗೆಯೂ ಭಿನ್ನಾಭಿಪ್ರಾಯವಿದೆ, ಅದು ರಂಜಾನ್‌ನ ಉಪವಾಸವೋ ಅಥವಾ ವ್ರತದ ಉಪವಾಸವೋ ಎಂಬುದು. ಹಾಗೆಯೇ ಒಂದೆಡೆ ಉಪವಾಸದ ಬಗ್ಗೆ ಕೇಳಿದರೆ ಇನ್ನೊಂದೆಡೆ ಹಜ್ ಯಾತ್ರೆಯ ಬಗ್ಗೆ ಕೇಳಲಾಗುತ್ತದೆ. (ಹಝ್ರತ್ ಸೈಯದ್ ಝೈನುಲ್ ಅಬಿದೀನ್ ವಲಿಯುಲ್ಲಾ ಶಾ ಸಾಹಿಬ್, ಸಂಪುಟ-3, ಪುಟ-630. ಕಿತಾಬ್ ಅಲ್-ಸೂಮ್ ಅವರಿಂದ ಶರ್ಹ್ ಅಲ್-ಬುಖಾರಿ)

ಹೀಗೆ, ಈ ರೀತಿಯ ಭಿನ್ನಾಭಿಪ್ರಾಯಗಳಿಂದಾಗಿ, ನಿಧನ ಹೊಂದಿದವರ ಪರವಾಗಿ ಉಪವಾಸ ಮಾಡುವ ಬಗ್ಗೆ ಮುಹದ್ದೀಸ್‌ಗಳಲ್ಲಿ ವಿಭಿನ್ನ ಅಭಿಪ್ರಾಯಗಳಿವೆ, ಆದರೆ ಅವರಲ್ಲಿ ಯಾರೂ ಅದನ್ನು ಕಡ್ಡಾಯವೆಂದು ಘೋಷಿಸಲಿಲ್ಲ.

ಹೇಗಾದರೂ, ಸತ್ತವರ ಪರವಾಗಿ ಅಲ್ಲಾಹನ ಸೃಷ್ಟಿಗೆ ಪ್ರಯೋಜನವಾಗುವಂತಹ ಕಾರ್ಯ ಮಾಡಿದರೆ ಅದು ಅದು ಸದಖ ಜಾರಿಯಾ (ನಿರಂತರವಾದ ದಾನವಾಗಿದೆ) ಆಗಿರುತ್ತದೆ, ಅದರ ಪ್ರತಿಫಲವು ಸತ್ತವರಿಗೆ ತಲುಪುತ್ತದೆ.

-------------*****-------------

## ಅಹ್ಮದಿ ವಿದ್ಯಾರ್ಥಿಗಳು ಗಮನಹರಿಸಬೇಕು (ಜಾಮಿಯ ಅಹ್ಮದಿಯಾ ಖಾದಿಯಾನ್‌ನಲ್ಲಿ ಪ್ರವೇಶ)

ಜಾಮಿಯಾ ಅಹ್ಮದಿಯಾ ಖಾದಿಯಾನ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿರುವ ಪವಿತ್ರ ಸಂಸ್ಥೆಯಾಗಿದ್ದು, ಅಲ್ಲಿ ನೂರಾರು ವಿದ್ವಾಂಸರು ಮತ್ತು ಮುಬಲ್ಲಿಗೀನರು (ಬೋಧಕರು) ಪದವಿ ಪಡೆದಿದ್ದಾರೆ ಮತ್ತು ಇಸ್ಲಾಂ ಧರ್ಮದ ನಿಜವಾದ ಬೋಧನೆಗಳನ್ನು ಪ್ರಪಂಚದ ಮೂಲೆಗಳಿಗೆ ಹರಡುವ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದಾರೆ. ಸಯ್ಯಿದುನಾ ಹುಝೂರ್ ಅನ್ವರ್(ಅತಬಿಅ) ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್‌ರವರು ಸ್ಥಾಪಿಸಿದ ಈ ಪವಿತ್ರ ಧಾರ್ಮಿಕ ಸಂಸ್ಥೆಯಿಂದ ಶಿಕ್ಷಣವನ್ನು ಪಡೆಯುವ ಮೂಲಕ ಸರಣಿಯ ಸೇವೆಯತ್ತ ಅಹ್ಮದಿ ವಿದ್ಯಾರ್ಥಿಗಳ ಗಮನವನ್ನು ಹಲವಾರು ಸಂದರ್ಭಗಳಲ್ಲಿ ಸೆಳೆದಿದ್ದಾರೆ. ಆದ್ದರಿಂದ, ಹುಝೂರ್ ಅನ್ವರ್(ಅತಬಿಅ) ಅವರ ಸೂಚನೆಗಳ ಬೆಳಕಿನಲ್ಲಿ, ಹೆಚ್ಚು ಹೆಚ್ಚು ವಾಖಿಫೀನೆ ನೌ ಹಾಗೂ ವಾಖಿಫೀನ್ ಅಲ್ಲದ ಹೊಸ ವಿದ್ಯಾರ್ಥಿಗಳನ್ನು ಜಾಮಿಯಾ ಅಹ್ಮದಿಯಾದಲ್ಲಿ ಪ್ರವೇಶವನ್ನು ಪಡೆದು ಧಾರ್ಮಿಕ ಶಿಕ್ಷಣವನ್ನು ಪಡೆದುಕೊಂಡು ಸರಣಿಯ (ಜಮಾಅತ್ತಿನ) ಸೇವೆಗೆ ತಮ್ಮನ್ನು ತಾವು ಅರ್ಪಿಸಿಕೊಳ್ಳಬೇಕು.

ಜಾಮಿಯಾ ಅಹ್ಮದಿಯಾದಲ್ಲಿ 2024-2025ರ ಶೈಕ್ಷಣಿಕ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯು ಏಪ್ರಿಲ್ 2024 ರಿಂದ ಪ್ರಾರಂಭವಾಗಿದೆ. ಸದ್ಯದ ಪರಿಸ್ಥಿತಿಯಲ್ಲಿ ಜಾಮಿಯಾ ಅಹ್ಮದೀಯಕ್ಕೆ ಪ್ರವೇಶ ಬಯಸುವ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಯನ್ನು ಆನ್‌ಲೈನ್ ಮುಖಾಂತರ ನಡೆಸಲಾಗುತ್ತಿದೆ. ಆದ್ದರಿಂದ, ಜಾಮಿಯಾ ಅಹ್ಮದಿಯಕ್ಕೆ ಸೇರಲು ಬಯಸುವ ವಿದ್ಯಾರ್ಥಿಗಳು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್) ಅನ್ನು ಸಂಪರ್ಕಿಸಿ ಹಾಗೂ ಸಾಧ್ಯವಾದಷ್ಟು ಬೇಗ ಜಾಮಿಯಾ ಅಹ್ಮದಿಯಾ ಪ್ರವೇಶ ಪತ್ರವನ್ನು ಭರ್ತಿ ಮಾಡಿ ಅದನ್ನು ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಕಚೇರಿಗೆ ಇ-ಟಚಿಟ ಅಥವಾ ಪೋಷ್ಟ್ ಮೂಲಕ ಕಳುಹಿಸಬೇಕು. ಪ್ರವೇಶದ ಷರತ್ತುಗಳಿಗಾಗಿ ವಖ್ಫೆನೌ ಭಾರತ್ (ನಝಾರತ್ ತಅ್‌ಲೀಮ್)ನ ಇಲಾಖೆಯನ್ನು ಸಂಪರ್ಕಿಸಬಹುದು.

**(ಸದರ್ ಕೆರಿಯರ್ ಪ್ಲಾನಿಂಗ್ ಕಮೀಟಿ ವಖ್ಫೆ ನೌ ಭಾರತ)**

## ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ವಾರಪತ್ರಿಕೆ "ಬದರ್" ಇದೀಗ ಕನ್ನಡದಲ್ಲಿ ಪ್ರಕಟಗೊಳ್ಳುತ್ತಿದೆ.

ಈ ಪತ್ರಿಕೆಯ ಹೆಸರು **"ಬದರ್"** ಎಂದಾಗಿದೆ. ಪೂರ್ಣ ಚಂದ್ರ ಎಂದರ್ಥ. ಇದು ಜಮಾಅತೆ ಅಹ್ಮದಿಯದ ಒಂದು ಧಾರ್ಮಿಕ ಪತ್ರಿಕೆ ಆಗಿದೆ ಅದರ ಮೂಲ ಉದ್ದೇಶ ಜಮಾಅತ್ತಿನ ಸದಸ್ಯರ ತರಬೇತಿ, ಶಿಕ್ಷಣ, ಒಳ್ಳೆ ನೈತಿಕತೆ ಕಲಿಸುವುದಾಗಿದೆ.

ನಮ್ಮ ಎರಡು ಉದ್ದೇಶಗಳಿವೆ. ಒಂದು ಅಲ್ಲಾಹನ ಹಕ್ಕನ್ನು ನಿಭಾಯಿಸುವುದು ಇನ್ನೊಂದು ದಾಸರ ಹಕ್ಕನ್ನು ನಿಭಾಯಿಸುವುದಾಗಿದೆ.

ಅಲ್ಲಾಹನ ಹಕ್ಕು ಏನಾಗಿದೆ ಎಂದರೆ ಅವನನ್ನು ಆರಾಧಿಸುವುದು ಅವನು ಎಲ್ಲಾ ಸ್ತುತಿ ಸರ್ವ ಲೋಕಗಳ ಪರಿಪಾಲಕನಾಗಿದ್ದಾನೆ ಮತ್ತು ಅವನ ಉಪಕಾರಗಳನ್ನು ನೆನಪಿಸಿಕೊಂಡು ಅವನಿಗೆ ವಿಧೇಯತೆ ತೋರಿಸುವುದಾಗಿದೆ.

ಇನ್ನೊಂದು ದಾಸರ ಹಕ್ಕನ್ನು ಈಡೇರಿಸುವುದಾಗಿದೆ. ದಾಸರ ಹಕ್ಕುಗಳೇನಂದರೆ ಅಗತ್ಯವುಳ್ಳವರನ್ನು ಸಹಾಯ ಮಾಡುವುದು, ಯಾರನ್ನು ದುಃಖ, ತೊಂದರೆ ಅಥವಾ ಸಂಕಷ್ಟ ಕೊಡಬಾರದು, ರಾಷ್ಟ್ರದಲ್ಲಿ ಕಿಡಿಗೇಡಿತನ ಹುಟ್ಟಿಸಬಾರದು, ಸ್ವದೇಶ ಪ್ರೇಮ ಈಮಾನಿನ ಒಂದು ಭಾಗವಾಗಿದೆ ಹಾಗೂ ಸ್ವದೇಶದ ಅಭಿವೃದ್ಧಿಗಾಗಿ ಶ್ರಮವಹಿಸುವುದಾಗಿದೆ.

ಈ ಪತ್ರಿಕೆಯು 100 ವರ್ಷಕ್ಕಿಂತ ಹೆಚ್ಚು ಕಾಲಾವಧಿಯಿಂದ ಈ ಉದ್ದೇಶದ ಪ್ರಕಾರ ಜಮಾಅತ್ತಿನ ಸದಸ್ಯರ ಶೈಕ್ಷಣಿಕವಾಗಿ ತರಬೇತಿ ಮಾಡುತ್ತಾ ಬಂದಿದೆ. ಅದರ ಪ್ರತಿ ಫಲವಾಗಿ ನಮಗೆ ಅಲ್ಲಾಹನ ಅನುಗ್ರಹದಿಂದ ಶಾಂತಿಯುತ ಪಂಗಡ ಎಂದು ವಿಶ್ವದಾದ್ಯಂತ ಪರಿಗಣಿಸುತ್ತಾರೆ.

ಅಕ್ಟೋಬರ್ 1902ರಲ್ಲಿ ಜಾಗತಿಕ ಅಹ್ಮದಿಯ ಮಯಸ್ಲಿಮ್ ಜಮಾಅತ್ತಿನ ಸಂಸ್ಥಾಪಕರಾದ ಹಝ್ರತ್ ಮಿರ್ಝ ಗುಲಾಮ್ ಅಹ್ಮದ್ ಖದಿಯಾನಿ(ಅಲೈಹಿಸ್ಸಲಾಮ್) ಅವರು ಈ ಪತರಿಕೆಯನ್ನು ಉರ್ದು ಭಾಷೆಯಲ್ಲಿ ಉದ್ಘಾಟಿಸಿದರು. ಇಂದು ಈ ಪತ್ರಿಕೆಯು ಭಾರತದ ಏಳು ಭಾಷೆಗಳಲ್ಲಿ ಭಾಷಾಂತರವಾಗಿ ಪ್ರಕಟಗೊಳ್ಳುತ್ತಿದೆ. ಉರ್ದುವನ್ನು ಬಿಟ್ಟು ಹಿಂದಿ, ತಮಿಳು, ತೆಲುಗು, ಬಾಂಗ್ಲ, ಉಡಿಯಾ, ಮಳಯಾಳಂ ಹಾಗೂ ಕನ್ನಡ. ಕಳೆದ 5 ವರ್ಷದಿಂದ ಕನ್ನಡದಲ್ಲಿಯು ಈ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಬಹಳ ಸಂತೋಷದ ವಿಷಯವಾಗಿದೆ. ಈ ಪತ್ರಿಕೆಯು ಧಾರ್ಮಿಕ ಪತ್ರಿಕೆ ಆದ್ದರಿಂದ ರಾಜಕೀಯ ನಿಟ್ಟಿನಲ್ಲಿ ಯಾವ ಸಂಬಂಧವೂ ಇಲ್ಲ.

ಈ ಪತ್ರಿಕೆಯಲ್ಲಿ ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಪಂಚಮ ಖಲೀಫ ಹಝ್ರತ್ ಮಿರ್ಝ ಮಸ್‌ರೂರ್ ಅಹ್ಮದ್‌ರವರ ಶುಕ್ರವಾರದ ಪ್ರವಚನ (ಖುತ್‌ಬ ಜುಮುಅ) ವಿಶೇಶವಾಗಿರುತ್ತದೆ. ಆ ಖುತ್‌ಬದಲ್ಲಿ ಅವರು ಪವಿತ್ರ ಖುರ್‌ಆನ್ ಹಾಗೂ ಹದೀಸ್‌ಗಳ ಶಿಕ್ಷಣಗಳ ಪ್ರಕಾರ ತಮ್ಮ ಜಮಾಅತ್ತಿನ ಸದಸ್ಯರನ್ನು ಸಂಬೋಧಿಸುತ್ತಾರೆ. ನಿಮ್ಮ ಈ ಪ್ರವಚನವೂ ಎಂ.ಟಿ.ಎ ಎಂಬ ಚ್ಯಾನಲ್‌ನಲ್ಲಿ ಪ್ರತಿ ಶುಕ್ರವಾರ ನೇರವಾಗಿ ಪ್ರಸಾರವಾಗುತ್ತದೆ. ಅದನ್ನು ಇಡೀ ವಿಶ್ವದಾದ್ಯಂತ ಕೇಳ ಹಾಗೂ ನೋಡಬಹುದು. ತದನಂತರ ಈ ಖುತ್‌ಬ ಪತ್ರಿಕೆಯಲ್ಲಿ ಪಕಟಗೊಳ್ಳುತ್ತದೆ. ಖಲೀಫರ ಖುತ್‌ಬ ಈ ಪತ್ರಿಕೆಯ ಪ್ರಾಣವಾಗಿದೆ.

ಹಝ್ರತ್ ಮಿರ್ಝ ಮಸ್‌ರೂರ್ ಅಹ್ಮದ್ ವಾಗ್ದಾತ್ತ ಮಹೀಹರ 5ನೇ ಖಲೀಫರಾಗಿದ್ದಾರೆ ಅವರು ಲಂಡನ್‌ನಲ್ಲಿ ವಾಸವಾಗಿದ್ದಾರೆ. ಜಾಗತಿಕ ಅಹ್ಮದಿಯ ಮುಸ್ಲಿಮ್ ಜಮಾಅತ್ತಿನ ಇಮಾಮರಾಗಿದ್ದಾರೆ. ಅದಲ್ಲದೆ ಈ ಪತ್ರಿಕೆಯಲ್ಲಿ ಖಲೀಫರ ಪ್ರವಾಸಗಳ ವರದಿಗಳು ಪ್ರಕಟಗೊಳ್ಳುತ್ತದೆ ಅವೂ ಬಹಳ ಕುತೂಹಲಕಾರಿ ಆಗಿರುತ್ತದೆ. ಈ ವರದಿಗಳು ಜಮಾಅತ್ತಿನ ಸದಸ್ಯರ ಜ್ಞಾನ ಅಭಿವೃದ್ಧಿಯಲ್ಲಿ ವಿಶೇಶವಾಗಿ ಕಾರ್ಯ ನಿರ್ವಹಿಸುತ್ತದೆ. ಇದಲ್ಲದೆ ಜಮಾಅತ್ತಿನ ಕಾರ್ಯಗಳ ವರದಿಗಳು ಮತ್ತು ಆಧ್ಯಾತ್ಮಿಕ ಹಾಗೂ ಶೈಕ್ಷಣಿಕ ಅಭಿವೃದ್ಧಿಸುವಂತಹ ಜ್ಞಾನ ಭರಿತ ಲೇಖನಗಳು ಪ್ರಕಟಗೊಳ್ಳುತ್ತದೆ.

ಹೀಗಾಗಿ ಈ ಪತ್ರಿಕೆಯು ಮಹತ್ವಪೂರ್ಣವಾದ ಪತ್ರಿಕೆ ಆಗಿದೆ.

ಎಲ್ಲಾ ಓದುಗರಲ್ಲಿ ಈ ಪತ್ರಿಕೆಯನ್ನು ಕೊಂಡುಕೊಳ್ಳಬೇಕಾಗಿ ವಿನಂತಿಸಲಾಗುತ್ತಿದೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: +91 99153 79255, 9902678609, 9760468663 (ವ್ಯವಸ್ಥಾಪಕರು)

**MUSLIM TELEVISION AHMADIYYA INTERNATIONAL**
www.mta.tv

ಶಹಾವಲ್ ಬಿಲಾಲ್ ಎಂಬ ಓರ್ವ ಯುವಕರು ಅವರು ಪಿಂಡಿಭಾಗೋ ಸಿಮಾಲ್ಕೋಟ್‌ಗೆ ಸಂಬಂಧಿಸಿದವರಾಗಿದ್ದರು. ಅವರು ಒಂದೂವರೆ ವರ್ಷ ಮೊದಲು ಜರ್ಮನಿಗೆ ಬಂದಿದ್ದರು, ಅವರು ಹೇಳುತ್ತಾರೆ. ಪಾಕಿಸ್ತಾನದಲ್ಲಿ ಎಷ್ಟೋ ಅಹ್ಮದಿಯರು ಹುಝೂರೆ ಅನ್ವರ್(ಅಬಿಅ)ರ ಭೇಟಿಗಾಗಿ ಆತುರಪಡುವವರಾಗಿದ್ದಾರೆ. ನಾನು ತುಂಬಾ ಅದೃಷ್ಟವಂತನು. ನನಗೆ ಇಂದು ಈ ಅವಕಾಶ ದೊರೆತಿದೆ. ಪಾಕಿಸ್ತಾನದ ಪರಿಸ್ಥಿತಿಗಳ ಬಗ್ಗೆ ಪ್ರೀತಿಯ ಹುಝೂರರಿಗೆ ದುಆ ಮಾಡಲು ಹೇಳಿದೆ, ಹುಝೂರೆ ಅನ್ವರ್(ಅಬಿಅ) ಹೇಳಿದರು. ದುಆ ಮಾಡುವೆವು. ನಾನು ಉಂಗುರವನ್ನು ಪ್ರಸಾದಿತಗೊಳಿಸಿದೆ.

ಸಫೀರ್ ಅಹ್ಮದ್ ಸಾಹಿಬ್ 23 ವರ್ಷದ ಯುವಕರಾಗಿದ್ದಾರೆ, ಅವರು ಹೇಳುತ್ತಾರೆ. ನಾನು ಭೇಟಿಯಾಗುತ್ತಿದ್ದೆನು ಎಂಬುದಕ್ಕೆ ಭರವಸೆಯೇ ಮಾಡುತ್ತಿರಲಿಲ್ಲ, ಅಲ್ಲಾಹನ ಕೃಪೆಯಿಂದ ಈ ಅವಕಾಶ ದೊರೆತಿದೆ. ಹುಝೂರೆ ಅನ್ವರ್(ಅಬಿಅ) ಹೇಳಿದರು. ನೀವು ಜಮಾಅತಿಗೆ ಸೇವೆ ಸಲ್ಲಿಸುತ್ತಿದ್ದನ್ನು ಮುಂದುವರೆಸಿರಿ.

ನವೀದ್ ಅಹ್ಮದ್ ಸಾಹಿಬ್ ಗಂಡಸಿಂಗ್ ಜಿಲ್ಲಾ ಪೈಸಲಾಬಾದ್‌ಗೆ ಸಂಬಂಧಿಸಿದವರು. ಅವರು ಸಹ ಕುಟುಂಬ ಸಹಿತ ಮೊದಲ ಬಾರಿಗೆ ಭೇಟಿಗಾಗಿ ಬಂದಿರುತ್ತಾರೆ. ಅವರು ತಮ್ಮ ಅನಿಸಿಕೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ಅಲ್ಲಾಹನು ಹುಝೂರರ ಮುಖವನ್ನು ಪ್ರಕಾಶದಿಂದ ತುಂಬಿರುತ್ತಾನೆ. ನನಗೆ ನೋಡಲು ಕಣ್ಣು ಸಾಲುತ್ತಿರಲಿಲ್ಲ. ನನ್ನ ಮಗ ಎರಡು ವರ್ಷದ್ದಾಗುತ್ತ ಇದೆ. ಹುಝೂರೆ ಅನ್ವರ್(ಅಬಿಅ) ಪ್ರೀತಿಯಿಂದ ಅವನ ತಲೆಯ ಮೇಲೆ ಕೈಯನ್ನು ಸವರಿಸಿದರು. ಇವರುಗಳು ಭಾವವಶರಾಗಿದ್ದರು. ಆದ್ದರಿಂದ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ಹೇಳಿದರು. ಈ ನನ್ನ ಮಗ ವಖ್ಫೆ ನೌನಲ್ಲಿದ್ದಾನೆ, ಈಗ ನಾನು ಮತ್ತು ನನ್ನ ಮಗ ಜಮಾಅತ್‌ಗಾಗಿ ಎಲ್ಲಾ ರೀತಿಯ ಸೇವೆ ಸಲ್ಲಿಸುತ್ತೇವೆ.

ರಫೀಖ್ ಅಹ್ಮದ್ ಬಾಜ್ವಾ ಸಾಹಿಬ್‌ರವರ ವಯಸ್ಸು 71 ವರ್ಷ ಆಗಿದೆ. ಅವರು ಫಾರೂಕಾಬಾದ್‌ನವರಾಗಿದ್ದಾರೆ. ಅವರದ್ದು ಸಹ ಕುಟುಂಬ ಸಹಿತ ಇದು ಮೊದಲ ಭೇಟಿಯಾಗಿತ್ತು. ಹೇಳುತ್ತಾರೆ. ಹುಝೂರೆ ಅನ್ವರ್(ಅಬಿಅ) ಅವರಿಗೆ ನಾನು ಹಝ್ರತ್ ಪೈಗಂಬರ್(ಸ) ರವರ ಸಲಾಂ ತಲುಪಿಸಿದೆ. ಏಕೆಂದರೆ ಅವರು ಹಝ್ರತ್ ಮಸೀಹ್ ಮೌಊದ್(ಅ) ರವರ ಖಲೀಫರಾಗಿದ್ದಾರೆ. ಭೇಟಿಯ ಅಭಿಲಾಷೆ ಬಹುದಿನದಿಂದ ಇತ್ತು. ಮತ್ತು ಹುಝೂರೆ ಅನ್ವರ್(ಅಬಿಅ) ಅವರಿಗೆ ಟಿ.ವಿಯಲ್ಲಿ ನೋಡುವುದಕ್ಕೆ ಮತ್ತು ಸಮಕ್ಷಮ ನೋಡುವುದರಲ್ಲಿ ಭೂಮ್ಯಾಕಾಶದಷ್ಟು ವ್ಯತ್ಯಾಸವಿದೆ. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ ಮಾತನಾಡಿದರು. ನಿಶ್ಚಿತವಾಗಿಯೂ ಅವರು ಅಲ್ಲಹನ ಮೆಚ್ಚಿನ ವ್ಯಕ್ತಿಯಾಗಿದ್ದಾರೆ.

ಲಾಹೋರಿಗೆ ಸಂಬಂಧಿಸಿದವರಾದ ರಾಶಿದ್ ಮಿರ್ಝಾ ಸಾಹಿಬ್‌ರವರದ್ದು. ಖಲೀಫರೊಂದಿಗೆ ಇದು ಮೊದಲ ಭೇಟಿಯಾಗಿತ್ತು. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಅತ್ತುಬಿಟ್ಟರು ಮತ್ತು ಅವರ ಕೈಗಳು ಕಂಪಿಸುತ್ತಿದ್ದವು. ಅವರು ಹೇಳಿದರು. ಹುಝೂರೆ ಅನ್ವರ್(ಅಬಿಅ) ಅವರ ಪ್ರಕಾಶಭರಿತ ಮುಖ ಕಂಡು ಹೃದಯವು ಸಂತೋಷದಿಂದ ತುಂಬಿ ಹೋಯಿತು. ಅಷ್ಟು ಪ್ರಕಾಶಮಯವಾಗಿತ್ತು. ಅವರ ಮುಖ ಹುಝೂರೆ ಅನ್ವರ್(ಅಬಿಅ) ಅವರಿಗೆ ದುಆ ಮಾಡಲು ಪತ್ರವನ್ನು ಬರೆದಾಗ ಎಲ್ಲಾ ಕಾರ್ಯಗಳು ಸಫಲವಾಗುತ್ತವೆ.

ಕೋಯಿಟಾದಿಂದ ಮುನ್‌ಇಮ್ ಆಫ್‌ತಾಬ್ ಸಾಹಿಬ್ ಹೇಳುತ್ತಾರೆ, ಇದು ನನ್ನ ಮೊದಲನೆಯ ಭೇಟಿಯಾಗಿತ್ತು. ನನ್ನ ಬಳಿ ಪದಗಳಿಲ್ಲ. ತುಂಬಾ ಸಂತೋಷವಾಯಿತು, ನನ್ನ ತಾಯಿಗೆ ಹೃದಯಘಾತವಾಗಿ ಕೆಲವೇ ದಿನಗಳಾಗಿದ್ದವು, ದುಆ ಮಾಡಲು ಹೇಳಿದೆ, ಇನ್‌ಶಾಅಲ್ಲಾಹ್ ಅವರು ಗುಣಮುಖರಾಗುವರು ಎಂದು ಹೇಳಿದರು. ನನ್ನ ಮಗಳಿಗೆ ತುಂಬಾ ಸಂತೋಷವಾಯಿತು. ಪ್ರೀತಿಯ ಹುಝೂರ್ ಅವರಿಗೆ ಸಿಹಿಯನ್ನು ಕೊಟ್ಟಾಗ ಜಝಾಕುಮಲ್ಲಾಹ್ ಹೇಳಿದರು, ಬಹಳ ಒಳ್ಳೆಯದಾಯಿತು.

ರಿಜ್ವಾನ್ ಅಹ್ಮದ್ ಸಾಹಿಬ್ ಜರ್ಮನಿಯ chemnitz ಜಮಾಅತ್‌ನಿಂದ ಬಂದಿದ್ದರು, ಅವರ ಮತ್ತು ಅವರ ಕುಟುಂಬದ ಇದು ಮೊದಲನೆಯ ಭೇಟಿಯಾಗಿತ್ತು. ಅವರು ಹೇಳುತ್ತಾರೆ. ಹುಝೂರೆ ಅನ್ವರ್(ಅಬಿಅ)ರ ಜೊತೆ ಹಂಚಿಕೊಳ್ಳಬೇಕಾದ ಬಹಳಷ್ಟು ಮಾತುಗಳಿದ್ದವು. ಆದರೆ ಹುಝೂರೆ ಅನ್ವರ್(ಅಬಿಅ)ರ ಮುಂದೆ ಹೋಗುತ್ತಿದ್ದಂತೆ, ಹುಝೂರೆ ಅನ್ವರ್(ಅಬಿಅ)ರ ಆಧ್ಯಾತ್ಮಿಕ ಪ್ರತಾಪದಿಂದಾಗಿ ಎಲ್ಲವೂ ಮರೆತುಹೋಯಿತು. ನಮ್ಮ ಎಲ್ಲರಿಗಿಂತ ಸಣ್ಣ ಮಗು ಎಷ್ಟರಮಟ್ಟಿಗೆ ಅನಾರೋಗ್ಯವಾಗಿದ್ದ ಎಂದರೆ ಡಾಕ್ಟರುಗಳು ಇನ್ನುಳಿಯುವುದಿಲ್ಲ ಎಂದಿದ್ದರು. ಆದರೆ ಹುಝೂರೆ ಅನ್ವರ್(ಅಬಿಅ) ಅವರ ದುಆದಿಂದಾಗಿ ಜೀವಂತನಾಗಿದ್ದಾನೆ ಮತ್ತು ಉತ್ತಮನಾಗುತ್ತಿದ್ದಾನೆ, ಇಂದು ಹುಝೂರೆ ಅನ್ವರ್(ಅಬಿಅ) ಅವರ ಬಗ್ಗೆ ಪ್ರಸ್ತಾಪಿಸಿದವರು ಮತ್ತು ಇನ್ನಷ್ಟು ಔಷಧಿ ಪಡೆಯಲು ಸಲಹೆ ನೀಡಿದರು.

ಮುಹಮ್ಮದ್ ಇಕ್ರಾಮ್ ಸಾಹಿಬ್ ಮತ್ತು ಅವರ ಪತ್ನಿ ಮೀರ್‌ಪೂರ್ ಖಾಸ್‌ಗೆ ಸಂಬಂಧಿಸಿದವರಾಗಿದ್ದಾರೆ, ಇನ್ನೂ ಕೆಲವೇ ತಿಂಗಳ ಹಿಂದೆ ಜರ್ಮನಿ ವಲಸೆಯಾಗಿ ಬಂದಿರುತ್ತಾರೆ. ಅವರು ಹಝ್ರತ್ ಖಲಿಫತುಲ್ ಮಸೀಹ್ ತೃತೀಯರೊಡನೆ ಭೇಟಿಯಾಗಿದ್ದರು. ಇಂದು ಹುಝೂರೆ ಅನ್ವರ್(ಅಬಿಅ)ರ ಜೊತೆ ಮೊದಲ ಭಾರಿಗೆ ಭೇಟಿ ಮಾಡುವ ಭಾಗ್ಯ ಪಡೆಯುತ್ತಿದ್ದಾರೆ, ದಂಪತಿಗಳಿಬ್ಬರೂ ಹೇಳಿದರು. ಹುಝೂರೆ ಅನ್ವರ್(ಅಬಿಅ) ಅವರನ್ನು ಕಂಡು ಹೃದಯ ತುಂಬಿ ಬಂತು, ನಮಗೆ ಏನೆಲ್ಲಾ ಕಷ್ಟಗಳಿದ್ದವು, ಅವೆಲ್ಲಾ ಕಷ್ಟಗಳಾಗಿ ಉಳಿದಿಲ್ಲ. ನಮ್ಮ ಮನಸ್ಸಿಗೆ ತೃಪ್ತಿಯಾಯಿತು.

ಭೇಟಿಗಳ ಈ ಕಾರ್ಯಕ್ರಮ 8.25 ಗಂಟೆಯವರೆಗೆ ಜಾರಿಯಲ್ಲಿತ್ತು. ಅನಂತರ ಹುಝೂರೆ ಅನ್ವರ್(ಅಬಿಅ) ಕೆಲ ಸಮಯಕ್ಕಾಗಿ ತಮ್ಮ ವಸತಿಯತ್ತ ತೆರಳಿದರು.

9 ಗಂಟೆಗೆ ಹುಝೂರೆ ಅನ್ವರ್(ಅಬಿಅ) ಬಂದು ಮಗ್ರಿಬ್ ಮತ್ತು ಇಶಾಅ ನಮಾಝ್‌ಗಳನ್ನು ಜಮಾ ಮಾಡಿ ನಿರ್ವಹಿಸಿಕೊಟ್ಟರು. ನಮಾಝ್ ನಂತರ ಹುಝೂರೆ ಅನ್ವರ್(ಅಬಿಅ) ತಮ್ಮ ವಸತಿಯತ್ತ ತೆರಳಿದರು.

**(ಮುಂದುವರಿಯುವುದು)**

"**ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)**"
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**ಪ್ರಮುಖ ಸೂಚನೆ** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **ಖುತ್‌ಬ ಜುಮುಅ**ವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ
**MUSLIM TELEVISION AHMADIYYA INTERNATIONAL**
**www.mta.tv**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯುದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಆಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2023 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

## *129 ನೇ ಜಲ್ಸಾ ಸಾಲಾನ ಖಾದಿಯಾನ್ 27, 28, 29 ಡಿಸೆಂಬರ್ 2023ರಂದು ಆಯೋಜಿಸಲಾಗುವುದು*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

"**ಯಾರು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಅರ್ಪಿಸುವುದಿಲ್ಲ.**"
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 18 July 2024, Issue No. 29

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-28ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಕೌಟುಂಬಿಕ ಭೇಟಿಗಳು**

ಇಂದು ಸಂಜೆಯ ಈ ಅಧಿವೇಶನದಲ್ಲಿ 40 ಕುಟುಂಬಗಳ 136 ಜನರು ತಮ್ಮ ಪ್ರೀತಿಯ ನೇತಾರರೊಡನೆ ಭೇಟಿ ಮಾಡುವ ಭಾಗ್ಯ ಪಡೆದರು. ಹುಝೂರೆ ಅನ್ವರ್(ಅಬಿಅ) ಪ್ರೀತಿಪೂರ್ವಕವಾಗಿ ಶಿಕ್ಷಣಾರ್ಥಿಗಳಿಗೆ ಲೇಖನಿಯನ್ನು ದಯಪಾಲಿಸಿದರು ಮತ್ತು ಸಣ್ಣ ವಯಸ್ಸಿನ ಮಕ್ಕಳಿಗೆ ಸಿಹಿಯನ್ನು ಹಂಚಿದರು.

ಇಂದು ಸಂಜೆಯ ಈ ಅಧಿವೇಶನದಲ್ಲಿ ಜರ್ಮನಿಯ ವಿವಿಧ ಜಮಾಅತುಗಳಿಂದ ಮತ್ತು ನಗರಗಳಿಂದ ಕುಟುಂಬಗಳು ಮತ್ತು ಜಮಾಅತ್ ಬಾಂಧವರು ಭೇಟಿಗಾಗಿ ತಲುಪಿದ್ದರು. ಕೆಲ ಜಮಾಅತ್ ಬಾಂಧವರು ಮತ್ತು ಕುಟುಂಬಗಳು ಬಹುದೂರದ ಪ್ರಯಾಣ ಬೆಳೆಸಿ ಇಲ್ಲಿ ಆಗಮಿಸಿದ್ದರು.

Ulm. Donau ಮತ್ತು Ebingen ಜಮಾಅತಿನಿಂದ ಬಂದವರು ಸುಮಾರು 300 ಕಿ.ಮೀ ಮತ್ತು ಜಮಾಅತ್ Hannover ಯಿಂದ ಬಂದವರು 337 ಕಿ.ಮೀ, Osnabrauck ಯಿಂದ ಬಂದವರು 343 ಕಿ.ಮೀ, Cheminitz ಯಿಂದ ಬಂದವರು 382 ಕಿ.ಮೀ, Jesteburg ಯಿಂದ ಬಂದವರು 462 ಕಿ.ಮೀ ನಷ್ಟು ಉದ್ದದ ಪ್ರಯಾಣ ಮಾಡಿ ಇಲ್ಲಿ ತಲುಪಿದ್ದರು.

ಭೇಟಿ ಮಾಡಲು ಬಂದವರಲ್ಲಿ ಬಹುತೇಕ ಕುಟುಂಬಗಳು ಪಾಕಿಸ್ತಾನದಿಂದ ಬಂದವರಾಗಿದ್ದರು ಮತ್ತು ತನ್ನ ಜೀವನದಲ್ಲಿ ಮೊದಲ ಬಾರಿಗೆ ತಮ್ಮ ಪ್ರೀತಿಯ ನೇತಾರರನ್ನು ಕಾಣಲು ಬಂದಿದ್ದರು.

ಅರ್ಸಲಾನ್ ಅಹ್ಮದ್ ಎಂಬ ಓರ್ವ ಯುವಕರು, ಅವರು ಸಿಯಾಲ್ಕೋಟಿನಿಂದ ಬಂದಿದ್ದರು, ಅವರು ಇಲ್ಲಿ Cheminitz ಜಮಾಅತ್‌ನ ಸದಸ್ಯರಾಗಿದ್ದರು, ಅವರು ತಮ್ಮ ಭಾವನೆಗಳನ್ನು ಹೀಗೆ ವ್ಯಕ್ತಪಡಿಸುತ್ತಾರೆ. ನನ್ನ ಹೃದಯದ ಅವಸ್ಥೆಯ ಬಗ್ಗೆ ಕೇಳುವುದು ಬೇಡ, ಹೊರಗಿದ್ದಾಗ ತಾಳ್ಮೆಯಿರಲಿಲ್ಲ, ಏನೆಲ್ಲಾ ಯೋಚನೆ ಮಾಡಿಕೊಂಡಿದ್ದೆ. ಆದರೆ ಒಳಗೆ ಬರುತ್ತಲೇ ಮಾತು ಸಹ ಆಡಲಿಕ್ಕೆ ಬರಲಿಲ್ಲ. ಆದರೆ ಹೃದಯಕ್ಕೆ ಸಮಾಧಾನ ದೊರೆಯಿತು. ಅವರ ತಾಯಿಯು ಜೊತೆಗಿದ್ದರು. ಅವರು ಸಹ ಭಾವವಶರಾಗಿದ್ದರು ಮತ್ತು ಅವರ ನಯನಗಳು ಅಶುಭಂತಾಗಿದ್ದವು.

ಓರ್ವ ಮಿತ್ರರು ಸಿದ್ದೀಖ್ ಅಹ್ಮದ್ ಸಾಹಿಬ್ ಪೇಶಾವರ್‌ದಿಂದ ಆಗಮಿಸಿದ್ದರು. ಹಾಗೆ ನೋಡಿದರೆ ಅವರ ಸಂಬಂಧ ಅಫ್ಘಾನಿಸ್ತಾನದಿಂದ ಇತ್ತು. ಹುಝೂರೆ ಅನ್ವರ್(ಅಬಿಅ)ರ ಜೊತೆ ಅವರ ಇದು ಮೊದಲನೆಯ ಭೇಟಿಯಾಗಿತ್ತು. ಇವರು ಸಹ ಭಾವವಶರಾಗಿದ್ದರು ಮತ್ತು ಮಾತನಾಡಲು ಆಗುತ್ತಿರಲಿಲ್ಲ. ಅವರು ತಿಳಿಸಿದರು. ಭೇಟಿಯಾದ ನಾವು ತುಂಬಾ ಪ್ರಾರ್ಥಿಸಿದೆವು. ಭೇಟಿ ಮಾಡಲು ಫೋನ್ ಬಂದಾಗ ತುಂಬಾ ಸಂತೋಷವಾಯಿತು.

ಬಹಾವಲ್‌ನಗರ ಪಾಕಿಸ್ತಾನದಿಂದ ಸಂಬಂಧ ಹೊಂದಿದ ಓರ್ವ ಮಿತ್ರರು ನವೀದ್ ಅಹ್ಮದ್ ಸಾಹಿಬ್ ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೇಳಿದರು. ನನಗಂತೂ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ನನ್ನ ಜೊತೆ ಮಗಳು ಸಹ ಇದ್ದಳು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ ವ್ಯವಹರಿಸಿದರು ಮತ್ತು ನನ್ನ ಪತ್ನಿಗೆ ಉಂಗುರ ದಯಪಾಲಿಸಿದರು.

ಮಿತ್ರರೊಬ್ಬರು ರಾನ ಖಾಲಿದ್ ಮೊಹಮೂದ್ ಸಾಹಿಬ್ ಕುಟುಂಬ ಸಹಿತ ಹುಝೂರೆ ಅನ್ವರ್(ಅಬಿಅ)ರ ಜೊತೆ ಇದು ಮೊದಲನೆಯ ಭೇಟಿಯಾಗಿತ್ತು. ಅವರು ಹೇಳಿದರು. ನನ್ನ ಪ್ರಾರ್ಥನೆಗಳು ಸ್ವೀಕಾರವಾದವು, ತುಂಬಾ ಸಂತೋಷವಾಯಿತು. ನನ್ನ ಜೀವನದ ಉದ್ದೇಶ ಇಂದು ಪೂರ್ತಿಯಾಯಿತು ಎಂಬ ಅನುಭವವಾಯಿತು. ಈ ಭೇಟಿ ಸಲುವಾಗಿ ಬಹಳಷ್ಟು ಪ್ರಾರ್ಥಿಸಿದ್ದೆ. ಭೇಟಿಯ ಸೂಚನೆ ಸಿಗುತ್ತಿದ್ದಂತೆ ಕೃತಜ್ಞತೆಗಾಗಿ ನಫಲ್ ನಮಾಝ್ ನಿರ್ವಹಿಸಿದೆ. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯ ವ್ಯವಹಾರ ಮಾಡಿದರು. ಉಂಗುರಗಳನ್ನು ನೀಡಿದರು. ಪ್ರಸಾದ ನೀಡಿದರು, ನಾನು 23 ವರ್ಷಗಳಿಂದ ಕಾರ್ಯ ಮಾಡುತ್ತಿದ್ದೇನೆ, ದಿನಾಲೂ ತಹಜ್ಜುದ್ ನಮಾಝ್ ಇರ್ವಹಿಸಿ ಕೆಲಸಕ್ಕೆ ಹೊರಡುತ್ತೇನೆ, ಪ್ರತಿ ನಮಾಝ್‌ನಲ್ಲೂ ಮೊದಲು ಹುಝೂರೆ ಅನ್ವರ್(ಅಬಿಅ) ಅವರಿಗಾಗಿ ಪ್ರಾರ್ಥಿಸುತ್ತೇನೆ. ನಿಮಗೆ ಏನಾದರೂ ಬೇಕಾಗಿದ್ದಲ್ಲಿ ಅಲ್ಲಾಹರೊಡನೆ ಬೇಡಿರಿ, ಅವನ ಮುಂದೆಯೇ ತಲೆಬಾಗಿರಿ, ಅವನು ನಿಮ್ಮ ಬೇಡಿಕೆಗಳನ್ನೆಲ್ಲ ಈಡೇರಿಸುವನು, ಹೊರತು ಈ ಲೋಕದ ಎಲ್ಲಾ ವಸ್ತುಗಳು ಸಾಮಾನುಗಳು ನಶ್ವರವಾಗುವುವು.

ಇನ್ನೋರ್ವ ಮಿತ್ರರು ಇರ್ಫಾನುಲ್ಲ ಸಾಹಿಬ್‌ರವರಿದ್ದರೂ ಸಹ ಕುಟುಂಬ ಸಮೇತ ಇದು ಮೊದಲ ಭೇಟಿಯಾಗಿತ್ತು. ಅವರ ಸಂಬಂಧ ಪಾಕಿಸ್ತಾನದಲ್ಲಿ ಗುಜರಾತ್‌ನಿಂದಿತ್ತು. ಅವರು ಹೇಳಿದರು. ಭಾವನೆಗಳ ಬಗ್ಗೆ ಕೇಳುವುದೇ ಬೇಡ, ಹೃದಯವು ನೂರಕ್ಕಿಂತ ಹೆಚ್ಚು ವೇಗದಿಂದ ಬಡಿತಿತ್ತು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಯಿಂದ ವ್ಯವಹರಿಸಿದರು. ಮಕ್ಕಳಿಗೆ ಸಿಹಿಯನ್ನು ಕೊಟ್ಟರು, ನನಗೆ ಉಂಗುರ ನೀಡಿದರು. ತುಂಬಾ ಸಂತೋಷವಾಯಿತು.

ವಾಜಿದ್ ಅಹ್ಮದ್ ಸಾಹಿಬ್ ಅವರು ಬಸ್ತಿ ಶುಕ್ರಾನಿಗೆ ಸಂಬಂಧಿಸಿದವರಾಗಿದ್ದರು. ಜಿಲ್ಲಾ ಬಹಾವಲ್ಪೂರ್ ಆಗಿತ್ತು. ಇವರು 2018 ರಲ್ಲಿ ಜರ್ಮನಿಗೆ ಬಂದಿದ್ದರು. ಇಂದು ಅವರ ಮೊದಲ ಭೇಟಿಯಾಗಿತ್ತು. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸುತ್ತಾ ಹೀಗೆ ಹೇಳುತ್ತಾರೆ. ಹುಝೂರ್ ಅನ್ವರ್ ಅವರ ಪ್ರಕಾಶಮಯ ಮುಖ ನೋಡಿ ನನಗೆ ಮಾತನಾಡಲು ಸಾಧ್ಯವಾಗಲಿಲ್ಲ, ಹುಝೂರರ ಪ್ರೀತಿ ನನ್ನ ಮತ್ತು ನನ್ನ ಕುಟುಂಬದ ಮೇಲೆ ಅಸಂಖ್ಯೆಯ ಅನುಗ್ರಹಗಳಿಗೆ ಕಾರಣವಾಗಿವೆ. ಪಾಕಿಸ್ತಾನದಲ್ಲಿ ಬಸ್ತಿ ಶುಕ್ರಾನಿಯ ಪರಿಸ್ಥಿತಿಗಳು ಬಹಳ ಹದಗೆಟ್ಟಿವೆ. ಜಮಾಅತನ್ನು ವಿರೋಧಿಸುವವರು ಹೆಚ್ಚಿದ್ದಾರೆ. ನಾನು ಹುಝೂರೆ ಅನ್ವರ್(ಅಬಿಅ)ರ ಸೇವೆಯಲ್ಲಿ ಪ್ರಾರ್ಥಿಸಲು ಬೇಡಿಕೊಂಡಾಗ ಹುಝೂರೆ ಅನ್ವರ್(ಅಬಿಅ) ಹೇಳಿದರು. ನಾನು ದುಆ ಮಾಡುವೆನು, ಅಲ್ಲಾಹನು ಅನುಗ್ರಹಿಸುವನು. ಆಮೀನ್.

ಮುಹಮ್ಮದ್ ಅಕ್ರಮ್ ಸಾಹಿಬ್ ಎಂಬ ಮಿತ್ರರು, ಅವರು ಬಹಾವಲ್ಪೂರ್ ನಿಂದ ಬಂದಿದ್ದರು. ಹೇಳಿದರು. ಇಂದು ಹುಝೂರರ ಜೊತೆ ಇದು ನನ್ನ ಮೊದಲ ಭೇಟಿಯಾಗಿತ್ತು. ಹುಝೂರೆ ಅನ್ವರ್(ಅಬಿಅ)ರ ಜೊತೆ ಭೇಟಿಯಾಗಿ ನಾನು ಮತ್ತೊಮ್ಮೆ ಈ ಜಗತ್ತಿಗೆ ಬಂದಿದ್ದೆನು ಎಂಬ ಭಾಸವಾಗುತ್ತದೆ. ಮನಸ್ಸಿಗೆ ಸಮಾಧಾನ ದೊರೆಯಿತು. ಹುಝೂರೆ ಅನ್ವರ್(ಅಬಿಅ)ರ ಸೇವೆಯಲ್ಲಿ ಪ್ರಾರ್ಥಿಸಲು ಬೇಡಿಕೊಂಡೆ. ಆಗ ಮನಸ್ಸಿಗೆ ತೃಪ್ತಿಯಾಯಿತು. ಜೇನು ಸಹ ಪ್ರಸಾದಿತಗೊಳಿಸಿದೆ.

ಇಹ್‌ಸಾನ್ ಅಹ್ಮದ್ ಸಾಹಿಬ್‌ರ ಸಂಬಂಧ ರಬ್ವಾದಿಂದಿದೆ. ಅವರದ್ದು ಸಹ ಹುಝೂರೆ ಅನ್ವರ್(ಅಬಿಅ)ರ ಜೊತೆ ಇದು ಮೊದಲ ಭೇಟಿಯಾಗಿತ್ತು. ಅವರು ಹೇಳುತ್ತಾರೆ. ನಾನು ತುಂಬಾ ಸಂತುಷ್ಟನಾಗಿದ್ದೇನೆ. ನಾನು ಮನಬಿಚ್ಚಿ ಮಾತನಾಡಿದ್ದೇನೆ. ಅವರ ಜೊತೆ ಅವರ 9 ವರ್ಷದ ಪುತ್ರ ಶಾಹ್‌ಝೇಬ್‌ನಿದ್ದನು. ಹೇಳಿದನು. ನನಗೆ ನಂಬಲು ಆಗುತ್ತಿರಲಿಲ್ಲ. ಒಂದು ಕನಸಿನಂತೆ ಕಾಣುತ್ತಿತ್ತು. ಪ್ರೀತಿಯ ಹುಝೂರೆ ಅನ್ವರ್(ಅಬಿಅ)ರು ನನ್ನ ಆಮೀನ್ ಮಾಡಿಸಿದರು ಮತ್ತು ನನಗೆ gifts ನೀಡಿದರು. ಹುಝೂರೆ ಅನ್ವರ್(ಅಬಿಅ) ತುಂಬಾ ಪ್ರೀತಿಸಿದರು.

*(ಪುಟ-11ರಲ್ಲಿ ಮುಂದುವರಿಸಲಾಗಿದೆ)*

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.